# ಅನುಬಂಧ ಭಾಗ

# ಹಳೆ ಒಡಂಬಡಿಕೆಯ ಬರಹಗಳು ನೆರವೇರಿದ ವಿಧಾನಗಳು

ಪ್ರವಾದನೆಗಳ ನೆರವೇರಿಕೆಯ ಕುರಿತಾಗಿ ಯೋಚಿಸುವಾಗ, ವಾಗ್ದಾನ ಮಾಡಿದ ಹಳೆ ಒಡಂಬಡಿಕೆಯ ಪ್ರವಾದನೆಗಳೆಲ್ಲವೂ, ಹೊಸ ಒಡಂಬಡಿಕೆಯಲ್ಲಿ ದಾಖಲು ಮಾಡಲಾಗಿದೆ. ಹೇಗೂ "ನೆರವೇರಿತು" ಎಂಬುದನ್ನು ವಿಭಿನ್ನವಾಗಿ ಬಿಂಬಿಸಲಾಗಿದೆ. ಫೋರ್‌ಟೋಲ್ಡ್ ಹಾಸ್ಪಲ್ ಎಂಬ ಪುಸ್ತಕದಲ್ಲಿ J. W. ಮೆಕ್‌ಗಾರ್ವೆಯವರು ಹಳೆ ಒಡಂಬಡಿಕೆಯ ಗ್ರಂಥಗಳ ನೆರವೇರಿಕೆಯ ಕುರಿತು ನಾಲ್ಕು ವಿಧಾನಗಳನ್ನು ವಿವರಿಸಿರುವರು ಮತ್ತಾಯನ ಸುವಾರ್ತೆಯ ಆರಂಭದಲ್ಲಿ ದಾಖಲಾಗಿರುವ ಅಂಶಗಳನ್ನು ದೃಷ್ಟಾಂತಿಸಿರುವರು.[1]

ಮೊದಲನೇ ವಿಧಾನವನ್ನು ಈ ಮೇಲಿನಂತಿದೆ. ನೇರವಾಗಿ ನೆರವೇರಿದ ಅಂಶಗಳನ್ನು ಹೊಸ ಒಡಂಬಡಿಕೆಯಲ್ಲಿ (ಒಂದೇ ಸಾರಿ ನೆರವೇರಿದ) ಮುಂತಿಳಿಸಿದಲಾಗಿದೆ. ಉದಾಹರಣೆಗೆ ಮತ್ತಾಯ 2:5, 6 ಇದು ಒಂದು ಪ್ರವಾದನೆ ಹಾಗೂ ನೆರವೇರಿದ ಅಂಶವಾಗಿದೆ. ಯೇಸು ಎಲ್ಲಿ ಹುಟ್ಟಬೇಕು ಎಂಬುದನ್ನು ತಿಳಿಯಲು ಯೆರೂಸಲೇಮಿನ ಧಾರ್ಮಿಕ ನಾಯಕರು ಮೀಕ 5:2ನ್ನು ವ್ಯಾಖ್ಯಾನಿಸಿರುವರು:

> ಎಫ್ರಾತದ ಬೇತ್ಲೆಹೇಮೇ, ನೀನು ಯೆಹೂದದ ಗ್ರಾಮಗಳಲ್ಲಿ ಚಿಕ್ಕದ್ದಾಗಿದ್ದರೂ ಇಸ್ರಾಯೇಲನ್ನು ಆಳತಕ್ಕವನು ನಿನ್ನೊಳಗಿಂದ ನನಗಾಗಿ ಹೊರಡುವನು; ಆತನ ಹೊರಡೋಣದ ಮೂಲವು ಪುರಾತನವೂ ಅನಾದಿಯೂ ಆದದ್ದು.

ಬೆತ್ಲೆಹೇಮಿನಲ್ಲಿ ಯೇಸು ಜನಿಸಿದಾಗ, ಈ ವಾಕ್ಯವು ನೆರವೇರಿತು. ಅದು ಮೊದಲ ಹಾಗೂ ಕಡೇಯ ಸಾರಿಯಾಗಿತ್ತು.

ಇನ್ನೊಂದು ವಿಧದಂತೆ ಹೊಸ ಒಡಂಬಡಿಕೆಯಲ್ಲಿ ದಾಖಲಾಗಿರುವ ಗುರುತರವಾದ ಸಂಗತಿಗಳು ಅಥವಾ ಮಾತುಗಳನ್ನು, ಹಳೇ ಒಡಂಬಡಿಕೆಯಲ್ಲಿ ಮುಂತಿಳಿಸಿದ್ದಾಗಿರುತ್ತದೆ. ಉದಾಹರಣೆಗೆ ಮತ್ತಾಯ 2:15ನ್ನು ನೋಡಬಹುದು. ಹೆರೋದನ ಮರಣದವರೆಗೆ ಯೋಸೇಫನು ಐಗುಪ್ತದಲ್ಲಿ ವಾಸಿಸಿದ್ದನು. "ನನ್ನ ಮಗನನ್ನು ಐಗುಪ್ತದಂದ ಕರೆದನು" ಎಂಬ ಹೊಶೆಯ 11:1ರ ಕರ್ತನ ಬಾಯಿಂದ ಹೋರಾಟ ನೆರವೇರಿದ ಅಂಶವಾಗಿದೆ. ಇಸ್ರಾಯೇಲ್ಯರು ಐಗುಪ್ತದ ದಾಸತ್ವದಿಂದ ಹೊರಬಂದ ಅಂಶದ ಸಂಕೇತವಾಗಿದೆ. ಯೌವ್ವನ ಕಾಲದ ಇಸ್ರಾಯೇಲನ್ನು ನಾನು ಪ್ರೀತಿಸಿದೆನು, ಆ ಮಗನನ್ನು ಐಗುಪ್ತದಿಂದ ಹಸ ಕರೆದನು. ಮಗುವಾದ ಯೇಸುವನ್ನು ಸಂರಕ್ಷಿಸಿದ ಅಂಶವನ್ನು, ದೇವರು ಇಸ್ರಾಯೇಲ್ಯರನ್ನು ಬಿಡುಗಡೆ ಮಾಡಿದ ಅಂಶಕ್ಕೆ ಹೋಲಿಸಲಾಗಿದೆ.

ಮತ್ತಾಯ 2:18 ಮತ್ತು ಯೆರೆಮೀಯ 31:15ರ ವಾಕ್ಯವಾಗಿದ್ದು ಇನ್ನೊಂದು ವಿಧದ ನೆರವೇರಿಕೆಯಾಗಿದೆ. ಬಾಬಿಲೋನಿನ ದಾಸತ್ವದಲ್ಲಿ ಉಂಟಾದ ರೋಧನೆಯ ಉದಾಹರಣೆಯಾಗಿದೆ. ಬೆತ್ಲೆಹೇಮಿನಲ್ಲಿ ಹೆರೋದನ ಕೂಸುಗಳನ್ನು ಕೊಂದು ಹಾಕಿ, ಜನಿಸಿದ ಅರಸನನ್ನು ಕೊಂದು ಹಾಕಿದ ಘಟನೆಯ ಅಂಶವು ಇದರಲ್ಲಿ ಒಳಗೊಂಡಿದೆ.

ಹಳೇ ಒಡಂಬಡಿಕೆಯ ಇನ್ನೊಂದು ಅಂಶವನ್ನು ಸವಿವರವಾದ ಭಾಷೆಯಲ್ಲಿ ಬಿಂಬಿಸಲಾಗಿದೆ. ಹೊಸ ಒಡಂಬಡಿಕೆಯಲ್ಲಿ ಆ ಭಾಷೆಯನ್ನು ಸಂಬಂಧಪಟ್ಟಂತೆ ಬಳಸಲಾಗಿದೆ:

> ಕರ್ತನು ಪ್ರವಾದಿಯ ಮುಖಾಂತರ ಹೇಳಿದ ಮಾತು ನೆರವೇರುವಂತೆ ಇದೆಲ್ಲಾ ನಡೆಯಿತು; ಆ ಮಾತು ಏನಂದರೆ, ಇಗೋ, ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆಯುವಳು; ಆತನಿಗೆ ಇಮ್ಮಾನುವೇಲ್ ಎಂದು ಹೆಸರಿಡುವರು ಎಂಬದು. ದೇವರು ನಮ್ಮ ಕೂಡ ಇದ್ದಾನೆಂದು ಈ ಹೆಸರಿನ ಅರ್ಥ.

ಯೆಶಾಯ 7:1-16ರಂತೆ ಬಿಡುಗಡೆ ಕುರಿತು ಅಹಾಜನಿಗೆ ಮಾಡಿದ ಮೂಲ ವಾಗ್ದಾನವಾಗಿದೆ. ಈ ವಾಗ್ದಾನದ ಒಂದು ಭಾಗವು ಆಹಾಜನಲ್ಲಿ ನೆರವೇರಿದ್ದರೂ, ಯೇಸುವಿನಲ್ಲಿ ಅದು ಪೂರ್ಣ ವಾಗಿ ನೆರವೇರಿತು ಎಂದು ಮತ್ತಾಯನು ತಿಳಿಸಿದ್ದಾನೆ.

ಕೆಲವು ಸಾರಿ ನಿರ್ಧಿಷ್ಟವಾದ ವಾಕ್ಯಭಾಗಗಳಲ್ಲಿ "ಪ್ರವಾದನೆ"ಗಳನ್ನು ಗಮನಿಸದೆ ಇದ್ದರೂ, ಹಳೇ ಒಡಂಬಡಿಕೆಯ ಸಹಜ ಉಪದೇಶಗಳಲ್ಲಿ ಹೊಸ ಒಡಂಬಡಿಕೆಯ ಘಟನೆಗಳಿಗೆ ಸಂಬಂಧ ಹೊಂದಿರುತ್ತವೆ. ಮತ್ತಾಯ 2:23 ಈ ಮೇಲಿನ ವ್ಯಾಖ್ಯಾನಕ್ಕೆ ಹೋಲಿಕೆ ಯಾಗಿದೆ. ಪ್ರವಾದನಾ ವಾಕ್ಯವು ನೆರವೇರುವಂತೆ, ಯೋಸೇಫನು ಯೇಸುವನ್ನು ಐಗುಪ್ತಕ್ಕೆ ಕರೆದೊಯ್ದನು: "ಆತನ ಹೆಸರು ನಜರಾಯನು" ಎಂದಿದ್ದರೂ, ಹಳೇ ಒಡಂಬಡಿಕೆಯಲ್ಲಿ ಈ ಹೆಸರನ್ನು ಆತನಿಗೆ ನೀಡಿರುವ ವಾಕ್ಯವಿರುವದಿಲ್ಲ. ಆದರೆ "ಪ್ರವಾದಿಗಳು" ಎಂಬ (ಬಹು ಪದದಲ್ಲಿ) ಇದರ ಒಳಾಂಶವು ಅಡಗಿದೆ. ಒಬ್ಬ ಪ್ರವಾದಿಯು ಇದನ್ನು ಬೋಧಿಸದೆ, ಅನೇಕ ಪ್ರವಾದಿಗಳ ಬೋಧನೆಗಳಲ್ಲಿ ಇದನ್ನು ತಿಳಿಸಿದ್ದಾರೆ. ಯೇಸುವಿನ "ನಜರಾಯನು ಎಂಬುದರ ಹಳೇ ಒಡಂಬಡಿಕೆಯ ಬೋಧನೆಯಲ್ಲಿರುವ ವ್ಯತ್ಯಸವೇನು?" ಹೊಸ ಒಡಂಬಡಿಕೆಯ ಕಾಲದಲ್ಲಿ ನಜರೇತ್ ಎಂಬ ಪಟ್ಟಣವು ತಿರಸ್ಕಾರಕ್ಕೆ ಒಳಗಾಗಿತ್ತು (ಯೋಹಾನ 1:46), ಮತ್ತು ಕ್ರಿಸ್ತನು ಸಹ ತಿರಸ್ಕರಿಸಲ್ಪಟ್ಟು ದಿಕ್ಕಾರಕ್ಕೊಳಗಾದನು (ಕೀರ್ತನೆ 22:6-8; 69:8, 20, 21; ಯೆಶಾಯ 49:7; 53:2, 5, 8; ದಾನಿಯೇಲ 9:26[2]). ಅಂದರೆ "ನಜರಾಯನು ಎಂಬುದು ದಿಕ್ಕಾರಗೊಳಗದವನು" ಎಂದು ಮತ್ತಾಯನು 2:23ರ ಅರ್ಥವಾಗಿದೆ.

ನೆರವೇರಿಕೆಗಳ ಬಗ್ಗೆ ಈ ನಾಲ್ಕು ವಿಧಾನಗಳು ಪೂರ್ಣ ವಿವರ ನೀಡದೆ ಹೋದರೂ, ಮತ್ತಾಯನ ಈ ಬೋಧವೆಯನ್ನು ಯೆಹೂದ್ಯರು ನ್ಯಾಯ ಸಮ್ಮತವಾದದ್ದು ಎಂದು ಪರಿಗಣಿಸಿದ್ದರು.

"ನೆರವೇರಿಕೆ" ಎಂಬ ಪದದಲ್ಲಿ ಒಂದು ಭಿನ್ನ ಪದ ಬಳಕೆಯಾಗಿದೆ.[3] ಹೊಸ ಒಡಂಬಡಿಕೆಯು, ಹಳೇ ಒಡಂಬಡಿಕೆಯ ವಾಕ್ಯ ಭಾಗಗಳನ್ನು "ಪೂರ್ಣವಾಗಿ ತುಂಬಿಸಿದೆ" ಹಳೆಯ ಅರ್ಥವನ್ನು ಪೂರ್ಣಾರ್ಥವಾಗಿ ಮಾಡಿದೆ.

## ಟಿಪ್ಪಣೆಗಳು

ಹಳೆಯ ಒಡಂಬಡಿಕೆಯ ಪ್ರವಾದನೆಗಳ ನೆರವೇರಿಕೆಗಳನ್ನು ಹೊಸ ಒಡಂಬಡಿಕೆಯಲ್ಲಿ ನೀಡಿರುವದರಿಂದ, ಈ ತರ್ಕವನ್ನು ನಾವು ನೆನಪು ಮಾಡಬೇಕಿದೆ. ನಾವುಗಳು ಪ್ರೇರಿತ ರಲ್ಲಿದವರಾದ್ದರಿಂದ, "ಇದು ಖಂಡಿತವಾಗಿ ನೆರವೇರಿದ" ವಾಕ್ಯ ಎಂದು ದೃಢೀಸಲಾಗದು. ಸತ್ಯವೇದವು ಅದಕ್ಕೆ ದೃಢೀಕರಣವನ್ನು ನೀಡುವದಾದರೆ ಮಾತ್ರ ಕೆಲವು ಪ್ರವಾದನೆಗಳು ಸತ್ಯ ಎಂದು ಅರಿಯಬಹುದು.

ಈ ಸತ್ಯಾಂಶಗಳನ್ನು ತಿಳಿಸಲು ನಿಮ್ಮ ತೀರ್ಮಾನವೇ ಅಂತಿಮವಾಗಿರಲಿ, ನಿಮ್ಮ ವಿದ್ಯಾರ್ಥಿಗಳಿಗೆ ಗೊಂದಲವೂ ಆಗಬಹುದು, ಹಳೆ ಒಡಂಬಡಿಕೆಯ ನೆರವೇರಿದೆ ಎಂಬುದರಲ್ಲಿ ಅವರು ತೃಪ್ತರಾಗಬಹುದು. ಈ ಹೆಚ್ಚಿನ ಮಾಹಿತಿಯನ್ನು ಬೋಧಕರಾದ ನಿಮ್ಮ ಸಹಾಯಕ್ಕಾಗಿ ನೀಡಿರುತ್ತೇನೆ. ಪ್ರತಿಯೊಂದನ್ನು ನಾನು ವಿವರಿಸದೆ ಹೋದರೂ, ಈ ಮುಂದೆ ನೀಡಿರುವ ಸಂಗತಿಗಳನ್ನು ನೀವುಗಳು ತುಲನೇ ಮಾಡಬಹುದು. ಹಳೇ ಒಡಂಬಡಿಕೆಯಲ್ಲಿನ ಪ್ರವಾದನೆಗಳು ಹೊಸ ಒಡಂಬಡಿಕೆಯಲ್ಲಿ ನೆರವೇರಿದ ಘಟನೆಗಳನ್ನು ಅರ್ಥಮಾಡಿಕೊಳ್ಳಲು

ಅವುಗಳು ನಿಮಗೆ ಸಹಾಯ ಮಾಡುತ್ತವೆ.

---

ಟಿಪ್ಪಣಿಗಳು

[1]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 25, 51-55. [2]ಯೆಶಾಯ 11:1 ಇಬ್ರಿಯ ಪದ "ಕೊಂಬೆ" ಯೆಶಾಯ 11:1 "ನಜರಾಯ" ಎಂಬ ಒಂದ ಪದ ಎಂಬುದಾಗಿದೆ. [3]"ತುಂಬಿಸಿದ" ಎಂಬ ಗ್ರೀಕ್‌ನ ನ್ಯಾಯಯುತವಾದ ಪದವಾಗಿದೆ.

## ನಾವು ಪರಿಶೀಲಿಸಬಹುದಾದ ಹೊಸ ಒಡಂಬಡಿಕೆಯ ಪ್ರವಾದನೆಗಳು

| *ಪ್ರವಾದನೆ* | *ಪ್ರವಾದಿಸಿದ ವಿಚಾರ ನೀಡಿರುವ ಸ್ಥಳ* | *ನೆರವೇರಿಕೆ* |
|---|---|---|
| ಯೇಸು ದೇವರ ಮಗನೆಂದು ದೇವದೂತರು ತಿಳಿಸಿದರು. | ಲೂಕ 1:32-35 | ಆತನು ಒಂದು ಚಿಕ್ಕ ಹಳ್ಳಿಯ ಬಡತಾಯಿಯಲ್ಲಿ ಜನಿಸಿದರು ದೇವರ ಮಗನೆಂದು ಪ್ರಖ್ಯಾತಿ ಗೊಂಡನು. |
| ಎಲ್ಲರೂ ಆಕೆಯನ್ನು ಧನ್ಯಳೆಂದು ಕರೆದವರು ಎಂದು ಮರಿಯಳು ತಿಳಿಸಿದಳು. | ಲೂಕ 1:48 | ಈಗಲೂ ಆಕೆಯನ್ನು ಧನ್ಯಳು ಎನ್ನುವರು. |
| ಜೀವ ಮಾರ್ಗಗಲ್ಲಿ ಕೆಲವರು ಮಾತ್ರ ಹೋಗುವರು ಎಂದು ಯೇಸು ತಿಳಿಸಿರುವನು. | ಮತ್ತಾಯ 7:13, 14 | ನಿಜವಾದ ವಿಶ್ವಾಸಿಗಳು ಈಗಲೂ ಆ ಮಾರ್ಗದಲ್ಲಿ ಮುಂದುವರೆದಿರುವರು. |
| ಆತನು ಸೋಲೋ ಮೋನನಿಗಿಂತಲೂ ದೊಡ್ಡವನು ಎಂದು ಯೇಸು ಪ್ರವಾದಿಸಿರುವನು. | ಮತ್ತಾಯ 12:42 | ಇತಿಹಾಸವೇ ಇದನ್ನು ಸತ್ಯವೆಂದು ಪರಿಗಣಿಸಿದೆ. |
| ಪಾತಾಳ ಲೋಕದ ಬಲವು ಸಭೆಯನ್ನು ಸೋಲಿಸಲಾರದು ಎಂಬ ಯೇಸುವಿನ ಪ್ರವಾದನೆ. | ಮತ್ತಾಯ 16:18 | ಆತನ ಸಭೆ ಇನ್ನು ಸಹ ಮುಂದುವರೆದಿದೆ. |
| ಎಲ್ಲೆಲ್ಲಿ ಸಾಕಾಲಾಗುವದೋ, ಅಲ್ಲಲ್ಲಿ ಆಕೆ ಮಾಡಿದ್ದನು ಹೇಳುವರು. | ಮತ್ತಾಯ 26:13 | ಈಗಲೂ ಆಕೆಯನ್ನು ನೆನಪು ಮಾಡಲಾಗುತ್ತದೆ. |
| ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ. | ಮತ್ತಾಯ 24:35 | ಯುಗಗಳಲ್ಲಿ ಆತನ ವಾಕ್ಯವು ಮುಂದುವರೆದದೆ. |
| ಸಕಲ ಜನಾಂಗದವರಿಗೆ ಸುವಾರ್ತೆಯು ಸಾಕಲ್ಪಡುತ್ತದೆ ಎಂದು ಯೇಸು ಪ್ರವಾದಿಸಿ ದನು. | ಮಾರ್ಕ 13:10; ಲೂಕ 24:47 | ಈಗಲೂ ಸಕಲ ಜನಾಂಗಗಳಿಗೆ ಸುವಾರ್ತೆ ಸಾರಲ್ಪಡುತ್ತಿದೆ. |

## ನಾವು ಪರಿಶೀಲಿಸಬಹುದಾದ ಹೊಸ ಒಡಂಬಡಿಕೆಯ ಪ್ರವಾದನೆಗಳು

| *ಪ್ರವಾದನೆ* | *ಪ್ರವಾದಿಸಿದ ವಿಚಾರ ನೀಡಿರುವ ಸ್ಥಳ* | *ನೆರವೇರಿಕೆ* |
|---|---|---|
| ಎಲ್ಲರನ್ನು ನನ್ನ ಬಳಿಗೆ ಎಳಕೊಳ್ಳುವೆನು ಎಂದು ಆತನು ಪ್ರವಾದಿಸಿದನು. | ಯೋಹಾನ 12:32 | ಸಕಲ ಜನಾಂಗದವರು, ಯೇಸುವನ ಬಳಿಗೆ ಸೆಳೆಯಲ್ಪಟ್ಟಿರುವರು. |

ಸಂಕಲನ - ಓವೆನ್ ಆಲ್‌ಬ್ರಿಲ್ಟ್

# ಮರಿಯಳ ಕುರಿತಾದ ಪ್ರಸಂಗ

## ಪರಿಚಯಕ್ಕೆ ಆಧಾರವಾಗುವ ವಿಷಯಗಳು

ಕ್ಯಾಥೋಲಿಕರು ಮರಿಯಳಿಗೆ ಹೆಚ್ಚು ಪ್ರಾಧಾನ್ಯತೆ ನೀಡಿರುವರು, ಪ್ರೊಟೆಸ್ಟಟೆಂಟರು ಹೆಚ್ಚಿನ ಆದ್ಯತೆ ನೀಡಿರುವದಿಲ್ಲ. ಮರಿಯಳನ್ನು ಆರಾಧಿಸಬೇಕು ಎಂದು ಗ್ರಂಥಗಳು ತಿಳಿಸುವದಿಲ್ಲ, ಆದಾಗ್ಯೂ ಅದಕ್ಕೆ ಗೌರವಕ್ಕೆ ಪಾತ್ರಳೇ ಏಕೆಂದರೆ ಆಕೆಯನ್ನು ಮಾತ್ರ ದೇವರು ನಮ್ಮ ಕರ್ತನಾದ ಯೇಸುವಿನ ತಾಯಿಯಾಗಿ ಆಯ್ಕೆಮಾಡಿರುವನು! ಆಕೆಯ ಸಕರಾತ್ಮಕ ಹಾಗೂ ನಕರಾತ್ಮಕ ಸಂಗತಿಗಳನ್ನು ಕ್ರೈಸ್ಟ ಸಭೆಗಳನ್ನು ಉಪದೇಶಿಸಬೇಕು.

ಈ ವಿಷಯದ ಕುರಿತು ನಾನು ಸಂಶೋಧನೆ ಮಾಡುವ ಮೊದಲು, ಸತ್ಯವೇದ ದಲ್ಲಿ ಆಕೆಯ ಕುರಿತಾದ ಮಾಹಿತಿಯ ಅತಿ ಸಂಕ್ಷಿಪ್ತವಾಗಿದೆ ಎಂದು ಗ್ರಹಿಸಿರಲಿಲ್ಲ. ಯೇಸುವಿನ ಜನನ ಹಾಗೂ ಬಾಲ್ಯದ ಮಾಹಿತಿಯನ್ನು ಹೊರತುಪಡಿಸಿ ಹೆಚ್ಚಿನ ಮಾಹಿತಿಯನ್ನು ಸುವಾರ್ತೆಗಳಲ್ಲಿ ನೀಡಿರುವದಿಲ್ಲ (ಯೋಹಾನ 2:1-12; ಮತ್ತಾಯ 12:46-50 [ಇದನ್ನು ನೋಡಿ ಮಾರ್ಕ 3:21, 31-35; ಲೂಕ 8:20, 21]; ಮತ್ತಾಯ 13:55 [ಇದನ್ನು ನೋಡಿ ಮಾರ್ಕ 6:3; ಯೋಹಾನ 6:42]; ಯೋಹಾನ 19:25-27), ಅಪೊಸ್ತಲರ ಕೃತ್ಯಗಳಲ್ಲಿನ ಆರಂಭದಲ್ಲಿ ಒಂದು ಬಾರಿ (ಅಪೊಸ್ತಲರ ಕೃತ್ಯಗಳು 1:14), ಪತ್ರಿಕೆಗಳಲ್ಲಿ ಯಾವುದೇ ದಾಖಲೆಗಳಿರುವದಿಲ್ಲ.[1] ಲೂಕ 1 ರಲ್ಲಿ ಮಾತ್ರ ಆಕೆಯ ಕುರಿತ ಹೆಚ್ಚಿನ ಮಾಹಿತಿ ಇದೆ. ಅದಾಗ್ಯೂ, ಪ್ರಸಂಗಕ್ಕೂ ಮತ್ತು ಬೋಧನೆಗೂ ಅಗತ್ಯವಿರುವಷ್ಟು ಮಾಹಿತಿಯು ಲಭ್ಯವಿದೆ. ಮುಂದಿನ ಪಾಠಗಳಲ್ಲಿ ವಿವಿಧ ಅಂಶಗಳನ್ನು ನೀಡಲಾಗಿದೆ.

### "ನನ್ನ ಕರ್ತನ ತಾಯಿ"

ಮುಂದಿನ ಪಾಠಗಳ ಸರಣಿಯಲ್ಲಿ, ಮರಿಯಳ ಕುರಿತಾದ ಪ್ರಸಂಗವನ್ನು ನೀಡಲಾಗಿದೆ. ಮರಿಯಳ ಕುರಿತಾಗಿ ಹೇಗೆ ಬರೆಯಲ್ಲಿ ಎಂದು ಯೋಚಿಸುವಾಗ, ಆಕೆಯ ಜೀವನ ಚರಿತ್ರೆಯನ್ನು ಅಭ್ಯಾಸ ಮಾಡಿದೆನು. ಆಕೆಯ ಕುರಿತಾಗಿ ಆಂಗ್ಲ ಭಾಷೆಯ "S" ಅಕ್ಷರದ ಬಳಕೆಯನ್ನು ಮಾಡಬಹುದು: (1) ಆಯ್ಕೆ ಮಾಡಲ್ಪಟ್ಟ ಮರಿಯಳು (ನನ್ನ ಕರ್ತನ ತಾಯಿಯಾಗಿ ಆಯ್ಕೆಯಾದವಳು); (2) ಜವಾಬ್ದಾರಿವುಳ್ಳ ಮರಿಯಳು (ಯೇಸುವಿನ ಬೆಳವಣಿಗೆಯ ಕರ್ತವ್ಯ); (3) ಹುಡುಕುವ ಮರಿಯಳು (ಮನ ಚಿಂತಕಳು); (4) ದುಃಖ ತಪ್ತಳಾದ ಮರಿಯಳು (ಶಿಲುಬೆಯ ಬಳಿ); (5) ರಕ್ಷಿಸಲ್ಪಟ್ಟ ಮರಿಯಳು (ಯೆರೂಸಲೇಮಿನ ಶಿಷ್ಯರ ಬಳಿಯಲ್ಲಿದ್ದವಳು).

### ಆಕೆಯನ್ನು "ಧನ್ಯಳೆಂದು" ಕರೆಯಿರಿ

ಆಕೆಯು ಧನ್ಯತೆಯ ಕುರಿತಾಗಿ ಮುಂದಿನ ಸರಣಿಯಲ್ಲಿ ಮರಿಯಳ ಕುರಿತಾದ ಪ್ರಸಂಗವನ್ನು ನೀವು ಮಾಡಬಹುದು. ಲೂಕ 1ರಲ್ಲಿ ಆಕೆಯ ಕುರಿತಾಗಿ ತಿಳಿಸಿರುವದನ್ನು ಗಮನಿಸೋಣ. ಕ್ರಿಸ್ತನ ಜೀವನ ಚರಿತ್ರೆಯ ಪಾಠದ ಮುಂದುವರಿಕೆಯಲ್ಲಿಯೂ ಅದನ್ನು ಗಮನಿಸಬಹುದು.

ದೇವರ ವಾಕ್ಯದಲ್ಲಿ ಆಕೆಯ ಕುರಿತು ತಿಳಿಯುವ ಮೊದಲು, ಆಕೆಯ ಕುರಿತ ತಪ್ಪು ಅಭಿಪ್ರಾಯಗಳನ್ನು ಅರ್ಥಮಾಡಿಕೊಳ್ಳೋಣ, ಮುಂದಿನ ಭಾಗವು ಇದರ ವಿವರಣೆಯನ್ನು ನೀಡುತ್ತದೆ.

# ನಿಜವಾದ ಮರಿಯಳು

ಯೇಸುವಿನ ತಾಯಿಯಾದ ಮರಿಯಳು ಒಂದು ಕಾಲದಲ್ಲಿ ನಿಜವಾಗಿ ಜೀವಿಸಿದ ವಿಶೇಷ ಸ್ತ್ರೀಯಾಗಿದ್ದಳು. ಲೂಕ 1:48ರ ಪ್ರಕಾರ, ಆಕೆಯು ಧನ್ಯಳೆಂದು ಪ್ರತಿಯೊಂದು ಜನಾಂಗವು, ಅರಿಕೆ ಮಾಡುತ್ತವೆ. ಆದರೆ ಆ ರೀತಿಯಾಗಿ ನಾವು ಮಾಡದೆ ಇರುವದರಿಂದ, ನಮ್ಮ ಅಧ್ಯಯನದ ಮೂಲಕ ಅದನ್ನು ಮಾಡಲು ಸಾಧ್ಯ ವಾಗಬಹುದು. ದೇವರು ಮರಿಯಳನ್ನು ಏಕೆ ಆಯ್ಕೆ ಮಾಡಿದನು. ಎಂದು ಅರಿಯುವ ಮೊದಲು, "ದೇವರು ಯಾವ ಮರಿಯಳನ್ನು ಆಯ್ಕೆ ಮಾಡಿದನು ಎಂದು ನಾವುಗಳು ತಿಳಿಯಬೇಕಾಗಿದೆ?"

ಕೆಲವಾರು ವರ್ಷಗಳ ಹಿಂದೆ ಅಮೇರಿಕೆಯಲ್ಲಿ, "ಸತ್ಯವನ್ನೇ ಹೇಳುವ" ಎಂಬ ಒಂದು ದೂರದರ್ಶನದ ಕಾರ್ಯಕ್ರಮ ಪ್ರಸಾರವಾಗುತ್ತಿತ್ತು. ಪ್ರತಿಸಿ ಕಾರ್ಯಕ್ರಮದಲ್ಲಿ, ಮೂರು ವ್ಯಕ್ತಿಗಳನ್ನು ಒಬ್ಬನೇ ವ್ಯಕ್ತಿಯೆಂದು ಪ್ರಚಾರಮಾಡಲಾಗುತ್ತಿತ್ತು - ಅಂದರೆ ವಿಶೇಷ ಕಾರ್ಯ ಮಾಡಿದವನು ಎಂದು ಬಿಂಬಿಸುತ್ತಿದ್ದರು. ಕಾರ್ಯಕ್ರಮ ನಡೆಸುವವರು, ಆ ಮೂರು ಜನರಿಗೆ ಪ್ರಶ್ನೆಗಳನ್ನು ಕೇಳಿ, ಸತ್ಯವನ್ನು ಯಾರು ಹೇಳುತ್ತಿರುವವರು ಎಂದು ಗ್ರಹಿಸಬೇಕಿತ್ತು. ಕಾರ್ಯಕ್ರಮದ ನಂತರ, ಆ ಸತ್ಯವಾದ ವ್ಯಕ್ತಿ ಎದ್ದು ನಿಲ್ಲಿರಿ? ಎಂದು ಹೇಳಲಾಗುತ್ತಿತ್ತು.

ಈ ಚಿತ್ರಣದ ನಿದರ್ಶನಂತೆ, ಮೂರು ಜನ ಸ್ತ್ರೀಯರು, ತಾವುಗಳು ಮರಿಯಳೆಂದು ಹೇಳುತ್ತಿದ್ದಾರೆ ಎಂದು ಚಿತ್ರಿಸಿಕೊಳ್ಳಿರಿ. ಮೊದಲನೆಯವಳು, ಆನೆ ದಂತದಂಥ ಚರ್ಮವನ್ನು ಹೊಂದಿ, ವಿಗ್ರಹದಂತೆಯೂ, ಸುಂದರವಾದ ಕೇಶರಾಶಿ ಹೊಂದಿದವಳಂತೆಯೂ, ಬೆಲೆ ಬಾಳುವ ವೇಷದಿಂದ ಕಾಣಿಸಿಕೊಳ್ಳುತ್ತಿದ್ದಾಳೆ. ಆಕೆಯ ತಲೆಯ ಸುತ್ತಲು ಬೆಳಕಿನ ಕಿರಣಗಳಿವೆ. ಆಕೆಯು ತನ್ನ ಬಲಗೈಯನ್ನು ಎತ್ತಿ ಆಶೀರ್ವದಿಸುತ್ತಿದ್ದಾಳೆ. "ನಾನೇ ಯೇಸುವಿನ ತಾಯಿ ಎಂದು" ಬಿಗುಮಾನದಿಂದ ಹೇಳುತ್ತಿರುವಳು ಇಂಥಹ ವಿಧವಾದ ಧಾರ್ಮಿಕ ಕಲೆಯನ್ನು ಹೊಂದಿದ ಮರಿಯಳನ್ನು ಅನೇಕರು ದರ್ಶನ ನೀಡುವವಳು ಎಂದು ಬಿಂಬಿಸುತ್ತಾರೆ. ಇಂಥಹ ಮರಿಯಳನ್ನು ಅನೇಕ ಧಾರ್ಮಿಕ ಜನರು ಸತ್ಯವೆಂದು ಒಪ್ಪಿಕೊಂಡಿದ್ದಾರೆ!

ನಂತರದಲ್ಲಿ, ಎರಡನೆಯ ಮಹಿಳೆಯು ನಿಂತುಕೊಂಡು, ಚಿಕ್ಕ ದೇಹವನ್ನು ಚಿಕ್ಕ ಸ್ವರವನ್ನು ಹೊಂದಿದ ಅವಳು, "ನಾನು ಯೇಸುವಿನ ತಾಯಿಯಾದ ಮರಿಯಳು" ಅನ್ನಲು, ಕೆಲವರು ಈಕೆಯೇ ಸತ್ಯವೇದದ ಮರಿಯಳು ಅನ್ನುವರು, ಕೆಲವರು ಇಂಥಹ ಮರಿಯಳನ್ನು ಅರಿತವರಾಗಿದ್ದಾರೆ.

ಅಂತಿಮವಾಗಿ, ಮೂರನೇ ಮರಿಯಳು ಎದ್ದು ನಿಲ್ಲುತ್ತಾಳೆ. ಆಕೆಯ ಕಪ್ಪಾದ ಚರ್ಮವನ್ನು, ಪಾಲಿಸ್ಟೇನ್ ಯೆಹೂದ್ಯರು ಹೊಂದಿರುವಂಥ ಕಪ್ಪಾದ ಕಣ್ಣನ್ನೂ ಹೊಂದಿದ್ದಾಳೆ. ರೈತರು ಧರಿಸುವ ವಸ್ತ್ರವನ್ನು ಧರಿಸಿದ್ದಾಳೆ. ಆಕೆಯ ಅಪರಿಮಿತ ಸಂತೋಷವನ್ನು ಆಳವಾದ ವೇದನೆಯನ್ನು ಹೊಂದಿದ್ದಳು. ಆಕೆ ಬಹಳ ದೀನತೆಯಿಂದ "ನಾನೇ ಯೇಸುವಿನ ತಾಯಿಯಾದ ಮರಿಯಳು ಎನ್ನುತ್ತಾಳೆ."

"ಯೇಸುವಿನ ನಿಜವಾದ ತಾಯಿಯಾದ ಮರಿಯಳು ಎದ್ದು ನಿಲ್ಲಬಹುದೇ?"

ಆಕೆಯನ್ನು ಧನ್ಯಳು ಎಂದು ಕರೆಯುವ ಮೊದಲು, ನಿಜವಾದ ಮರಿಯಳು ಯಾರೆಂದು ಪರಿಗ್ರಹಿಸಬೇಕು. ಈ ಕಾರ್ಯದ ನಂತರ, ಈಕೆಯು ಏಕೆ ವಿಶೇಷ ವ್ಯಕ್ತಿಯಾದಳು ಎಂಬ ಸಂಶೋಧನೆಯನ್ನು ಮಾಡಬಹುದು. ಈ ಪ್ರಸಂಗದ ಮತ್ತು ಮುಂದಿನ ಪಾಠದಲ್ಲಿನ ಮರಿಯಳ ಕುರಿತಾದ ವಿವರಗಳನ್ನು ಪಡೆದ ನಂತರ, ನಾವುಗಳು ಮರಿಯಳನ್ನು ಸನ್ಮಾನ್ಯಕ್ಕೆ ಅರ್ಹಳೆಂದು ಪರಿಗಣಿಸಿ, ಯಥಾರ್ಥವಾದ ಮರಿಯಳನ್ನೇ ಅರಿಯಬಹುದು.

ಈ ಮೊದಲ ಅಧ್ಯಯನದಲ್ಲಿ, ನಾನು "ನಿಜವಾದ ಮರಿಯಳ ಕುರಿತಾದ ಸಂಗತಿಗಳನ್ನು ಹೊರ ಹಾಕಲು ಪ್ರಯತ್ನಿಸುತ್ತೇನೆ." ಪ್ರಪಂಚದ ಅನೇಕ ಕಡೆಗಳಲ್ಲಿ ಬಹುಮಾನಗಳಿಗೆ ಬಣ್ಣದ ಕಾಗದಗಳಿಂದ ಸುತ್ತಿ ಅದಕ್ಕೆ ರಿಬ್ಬನ್‌ನನ್ನು ಕಟ್ಟಿರುತ್ತಾರೆ. ಬಹುಮಾನವನ್ನು ಪಡೆಯಲು ಅದರ ಹೊರ ಕವಚವನ್ನು ತೆಗೆದುಹಾಕಬೇಕು (ನನ್ನ ಮೊಮ್ಮಕ್ಕಳ ಬಹುಮಾನದ ಪಟ್ಟಣಗಳನ್ನು

ತೆಗೆಯುವದನ್ನು ನಾನು ನೆನಪಿಸುತ್ತೇನೆ) ನಂತರ ಬಹುಮಾನದ ಮೆಚ್ಚಲ್ಪಟ್ಟ ಕಾಗದವನ್ನು ಎಸೆದು ಬಿಡುತ್ತಾರೆ.

ಹೌದು, ಸತ್ಯವೇದದಲ್ಲಿ ತಿಳಿಸದೆ ಇರುವ ಅನೇಕ ಸಂಗತಿಗಳಿಂದ ಮರಿಯಳನ್ನು ವಿಶ್ಲೇಷಣೆ ಮಾಡಿದ್ದಾರೆ. ಆಕೆಯ ಗೌರವದ ನಿಮಿತ್ತ ಅದನ್ನು ಮಾಡಿದ್ದರೂ, ನಿಜವಾದ ಮರಿಯಳನ್ನು ಅವರು ಕಂಡುಹಿಡಿದಿರುವದಿಲ್ಲ. ನಾನು ಬಹುಮಾನವಿರುವ ಪಟ್ಟಣದ ಒಂದೊಂದೆ ಕಾಗದವನ್ನು ನಾನು ಬಿಚ್ಚುತ್ತೇನೆ. ನೀವು ಮರಿಯಳನ್ನು ಗೌರವಿಸಬೇಕು ಎಂಬ ಬೋಧನೆಯನ್ನು ಕೇಳಿರುವವನಾಗಿದ್ದೇನೆ, ನಾನು ಹೇಳುವಂಥ ಯಾವುದೇ ಸಂಗತಿಗಳು, ಮರಿಯಳನ್ನು ಅಗೌರಪಡಿಸುವದಿಲ್ಲ, ಮೇಲಿರುವ ಕವಚವನ್ನು ತೆಗೆಯುವದರಿಂದ ಒಳಗಿನ ಬಹುಮಾನವು ತನ್ನ ಗೌರವವನ್ನು ಕಳೆದುಕೊಳ್ಳುವದಿಲ್ಲ. ಬಹುಮಾನವನ್ನು ನೋಡಬೇಕೆಂದರೆ ಕವಚವನ್ನು ತೆರೆಯಲೇಬೇಕು.

## ದೈಹೀಕ ಆಕಾರದ ಕುರಿತಾದ ತತ್ವ

ದೈಹೀಕ ಆಕಾರವೆಂಬ ಒಂದು ಕವಚ.[2] 1950ರಲ್ಲಿ "ಬುಲ್"[3] ಎಂಬ ಪತ್ರಿಕೆಯಲ್ಲಿ ಈ ಸಂಗತಿ ಪ್ರಕಟಗೊಂಡಿತ್ತು. ಆಕೆಯು ತನ್ನ ಭೌತಿಕ ಜೀವನದ ನಂತರ ತನ್ನ ಆತ್ಮ ಹಾಗೂ ದೇಹದೊಂದಿಗೆ ಪರಲೋಕಕ್ಕೆ ಏರಿ ಹೋದಳು ಎಂಬದಾಗಿತ್ತು. ಈ ಉಪದೇಶದಲ್ಲಿ ಎರಡು ಕೊರತೆಗಳಿವೆ: ಮೊದಲನೆಯದಾಗಿ ಸತ್ಯವೇದದಲ್ಲಿ ಈ ಸಂಗತಿಯು ಬರೆದಿರುವದಿಲ್ಲ.[4] ಎರಡನೆಯದಾಗಿ, ಇದಕ್ಕೆ ತದ್ವಿರುದ್ಧವಾದದ್ದನ್ನೇ ಸತ್ಯವೇದವು ತಿಳಿಸುತ್ತದೆ. ಯೇಸುವಿನ ಮಾತಿನಂತೆ, "ಪರಲೋಕದಿಂದ ಇಳಿದು ಬಂದವನೇ ಹೊರತು" ಮತ್ತಾರು ಪರಲೋಕಕ್ಕೆ ಏರಿ ಹೋದವನಲ್ಲ (ಯೋಹಾನ 3:13).[5] ಮೊದಲನೆಯ ಕವಚವನ್ನು ತೆರೆಯಬೇಕು.

## ಮರಿಯಳು ನಿಷ್ಕಳಂಕಳಲ್ಲ ಎಂಬ ವಿಚಾರದ ತತ್ವ

ಮರಿಯಳು ಪಾಪಿಯಾಗಿರಲಿಲ್ಲ ಎಂಬ ವಿಚಾರದ ಹೊರ ಕವಚವನ್ನು ಸಹ ತೆಗದುಹಾಕಬೇಕು. ನಾಲ್ಕು ಮತ್ತು ಐದನೇ ಶತಮಾನದಲ್ಲಿ ಈ ತತ್ವವು ಸಿದ್ಧಿಯಲ್ಲಿತ್ತು, 1854ರವರೆಗೆ ಅದಕ್ಕೆ ವಿವರಣೆ ದೊರೆತಿರಲಿಲ್ಲ. ಇದು ಸಂಪೂರ್ಣವಾದ ನೀತಿ ಭ್ರಷ್ಟತೆಯ ತತ್ವವಾಗಿದೆ. ಆದಾಮನ ಪಾಪದ ದೆಸೆಯಿಂದ ಮನುಷ್ಯನು ನೀತಿ ಭ್ರಷ್ಟತೆಯ ತತ್ವವಾಗಿದೆ. ಆದಾಮನ ಪಾಪದ ದೆಸೆಯಿಂದ ಮನುಷ್ಯನು ನೀತಿ ಭ್ರಷ್ಟನಾದನು ಎಂದು ಬೋಧಿಸುವ ಸಿದ್ಧಾಂಥವಾಗಿದೆ. ಅಪೊಸ್ತಲರ ಸಭೆಗಳು ನೀತಿ ಭ್ರಷ್ಟತೆಯ ಸ್ವಭಾವದ ಕುರಿತು ಬೋಧಿಸಿದರೂ, ಮರಿಯಳಲ್ಲಿ ಯಾವದೇ ಪಾಪವು ಇರಲಿಲ್ಲ ಎಂಬದು ರೋಮಾಯರ ಹೇಳಿಕೆಯಾಗಿತ್ತು. ಆದ್ದರಿಂದ ಮರಿಯಳು ಗರ್ಭ ಧರಿಸಿದಾಗ, ಅವಳು "ನಿಷ್ಕಳಂಕಳಾಗಿದ್ದಳು"[6] ಆದ್ದರಿಂದ ಆಕೆಯು ಹುಟ್ಟಿದಾಗ "ಪಾಪಿಯಾಗಿರಲಿಲ್ಲ" ಎಂದರು.

ಪ್ರತಿಯೊಂದು ಮಗುವು ಪಾಪದಲ್ಲಿ ಹುಟ್ಟುವದಿಲ್ಲ ಎಂದು ಸತ್ಯವೇದವು ತಿಳಿಸಿರುವದರಿಂದ, ಈ ಮೇಲಿನ ಸಂಗತಿಗೆ ನನ್ನ ಅಭ್ಯಂತರವಿರುವದಿಲ್ಲ "ಪರಲೋಕ ರಾಜ್ಯವು ಚಿಕ್ಕ ಮಕ್ಕಳದೇ" ಎಂದು ಯೇಸು ತಿಳಿಸಿರುವನು (ಮತ್ತಾಯ 19:14; ಇದನ್ನು ನೋಡಿ 8:3). ಪ್ರತಿಯೊಬ್ಬನು ತನ್ನ ಪಾಪಕ್ಕೆ ತಾನೇ ಹೊಣೆ ಎಂದು ಯೆಹೆಜ್ಕೆಲನು ತಿಳಿಸಿರುವನು. ನಮ್ಮ ತಂದೆಗಳ ಪಾಪಕ್ಕೆ ನಾವು ಹೊಣೆಗಾರರಲ್ಲ (ಯೆಹೆಜ್ಕೇಲ 18:20). ಇದರಲ್ಲಿ ಆದಾಮನು ಹೊರತಾಗಿರುವದಿಲ್ಲ.

ಆದಾಗ್ಯೂ ಅಪೊಸ್ತಲರ ಸಭೆಯು "ಪಾಪರಹಿತ" ಎಂಬ ಈ ವಿಚಾರದಲ್ಲಿ ಒಂದು ಹೆಜ್ಜೆ ಮುಂದಾಗಿದ್ದರು. ಹದಿನಾರನೇ ಶತಮಾನದಲ್ಲಿ ಮರಿಯಳು ನಿಜವಾದ ಹಾಗೂ ವ್ಯಯಕ್ತಿಕವಾದ ಪಾಪದಿಂದ ಮುಕ್ತಳು ಎಂದು "ಕೌನ್ಸಿಂಲ್ ಟ್ರೆಂಟ್" ದೃಢೀಕರಿಸಿತ್ತು. ಇದನ್ನು ನಾವು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಯಾಕೆಂದರೆ ಜೀವಿಸಿರುವವರಲ್ಲಿ ಯೇಸು ಕ್ರಿಸ್ತನು

ಮಾತ್ರ ಪಾಪರಹಿತನಾಗಿದ್ದನು ಎಂದು ಸತ್ಯವೇದವು ಸ್ಪಷ್ಟೀಕರಣ ನೀಡಿರುತ್ತದೆ (1 ಪೇತ್ರ 2:22; ಇಬ್ರಿಯ 4:15). ಉಳಿದವರೆಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದೇವೆ (ರೋಮಾಪುರ 3:10, 23; 1 ಯೋಹಾನ 1:10). ಲೂಕ 1ರಲ್ಲಿ ಮರಿಯಳ ಸ್ತೋತ್ರ ಗೀತದಲ್ಲಿ, "ನನ್ನ ಆತ್ಮವು ನನ್ನ ರಕ್ಷಕನ ಆನಂದಿಸುತ್ತದೆ" ಎಂದಿರುವರು (ವಚನ 47). ನಾಶವಾದವರಿಗೆ ಮಾತ್ರ ರಕ್ಷಕನ ಅಗತ್ಯವಿದೆ. ನಮಗೆ ಅಗತ್ಯವಿರುವಂತೆ ತನಗೆ *ರಕ್ಷಣೆ* ಅಗತ್ಯವಿದೆ ಎಂದು ಮರಿಯಳು ಗ್ರಹಿಸಿದ್ದಳು; ಪಾಪರಹಿತಳು ಎಂಬ ಸಿದ್ದಾಂಥದ ಕವಚವನ್ನು ತೆಗೆದು ಹಾಕಬೇಕು.

## ಮರಿಯಳ ಆರಾಧನೆ ಮತ್ತು ಮಹಿಮೆ ಪಡಿಸುವಿಕೆ

ಮೂರನೆಯ ಕವಚವು ಬಹು ಪ್ರಮುಖವಾದದ್ದು: ಮರಿಯಳ ಆರಾಧನೆ[7] ಮತ್ತು ಮಹಿಮೆ ಪಡಿಸುವಿಕೆ.[8] ಮರಿಯಳ ವಿಗ್ರಹಕ್ಕೆ ಪೂಜೆ, ಹಾಗೂ ಸತ್ಯವೇದದಲ್ಲಿ ಪ್ರಯೋಗಿಸಿದ ಹೆಸರುಗಳನ್ನು ಆಕೆಗೆ ನೀಡಿರುವದು, ಆಕೆಯನ್ನು "ದೇವರ ತಾಯಿ" ಎನ್ನುವದು.[9] ದೇವರ ಮುಂದೆ ಆಕೆ ನಮಗಾಗಿ ಪ್ರಾರ್ಥಿಸಲಿ ಎಂದು ಬೇಡುವದು. ಹದಿನೈದನೇ ಶತಮಾನದಲ್ಲಿ, ಆಕೆಯನ್ನು "ಈವ್ ಮರಿಯಾ" ಎಂದು ಸಂಬೋಧಿಸಿ: ಪವಿತ್ರ ಮರಿಯಳು, ದೇವರ ತಾಯಿಯೇ ನಮಗಾಗಿ ಪ್ರಾರ್ಥಿಸು ಎಂದರು. ಮರಿಯಳ ಬಗ್ಗೆ ಈ ತಪ್ಪು ಕಲ್ಪನೆ ಏಕೆ ಎಂಬುದು ನನ್ನ ಚಿಂತನೆಯಾಗಿದೆ. ಮರಿಯಳು ಮಧ್ಯವರ್ತಿ ಎಂದು ವಾಕ್ಯಗಳಲ್ಲಿ ಎಲ್ಲಿಯೂ ಬರೆದಿರುವದಿಲ್ಲ.[10] ಆದರೆ ಪೌಲನು ಈ ವಿಚಾರದಲ್ಲಿ, "ದೇವರಿಗೂ ಮನುಷ್ಯರಿಗೂ ಮಧ್ಯಸ್ತನು *ಒಬ್ಬನೇ*; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ" (1 ತಿಮೋಥೆ 2:5; ಒತ್ತಿ ಹೇಳಿದ್ದು ನನ್ನದು; ಇದನ್ನು ನೋಡಿರಿ 1 ಯೋಹಾನ 2:1; ಅಪೊಸ್ತಲರ ಕೃತ್ಯಗಳು 4:12) ಎಂದಿರುವನು.

ಇಲ್ಲಿ ದೇವರ ಬಗ್ಗೆ ಇರುವ ತಪ್ಪು ಅಭಿಪ್ರಾಯವನ್ನು ಚಿಂತನೆ ಮಾಡಬೇಕಿದೆ. ಏಕೆ ಮರಿಯಳಿಗೆ ಪ್ರಾರ್ಥಿಸುವಿ ಎಂದು ಒಬ್ಬಾಕೆಗೆ ಪ್ರಶ್ನಿಸಲು ಆಕೆಯು, "ಯೇಸು ಎಲ್ಲರ ಪ್ರಾರ್ಥನೆಗಳನ್ನು ಆಲಿಸುವದಾದರೆ, ತನ್ನ ತಾಯಿಯ ಬಿನ್ನಹವನ್ನೂ ಸಹ ಆಲಿಸುವನು. ಹಾಗಾದರೆ ದೇವರ ಮತ್ತು ಯೇಸುವಿನ ಕುರಿತು ವಿಚಾರವೇನು?" ಅವರು ನಮ್ಮ ಬಿನ್ನಹಗಳನ್ನು ಕೇಳುವದಿಲ್ಲವೇ ವರ್ಚಸ್ಸು ಇರುವ ಮತ್ತೊಬ್ಬ ವ್ಯಕ್ತಿಯ ಅಗತ್ಯವಿದೆಯೇ.[11] ದೇವರ ವಾಕ್ಯದ ಪ್ರಕಾರ, ದೇವರು ನಮ್ಮನ್ನು ಪ್ರೀತಿಸಿ, ನಮಗಾಗಿ ಚಿಂತಿಸುತ್ತಾನೆ ಎಂದು ತಿಳಿಸುತ್ತದೆ. "ದೇವರು ಪ್ರೀತಿ ಸ್ವರೂಪಿ" (1 ಯೋಹಾನ 14:8, 16). ನಮಗಾಗಿ ಚಿಂತಿಸುವ ದೇವರೂ ಆಗಿದ್ದಾನೆ (1 ಪೇತ್ರ 5:7). "ಆತನು ನಮ್ಮ ಬಲಹೀನತೆಗಾಗಿ ಪರಿತಾಪ ಪಡುತ್ತಾನೆ" ಎಂದು ಇಬ್ರಿಯ ಬರಹಗಾರನು ತಿಳಿಸಿರುವನು. ಆದ್ದರಿಂದ ನಾವು ಸಮಯೋಚಿತವಾದ ಸಹಾಯವು ದೊರೆಯುವಂತೆ, ಆತನ ಕೃಪಾಸನದ ಬಳಿಗೆ ಧೈರ್ಯವಾಗಿ ಬರಬಹುದಾಗಿದೆ (ಇಬ್ರಿಯ 4:14-16).[12]

ಅಪೊಸ್ತಲರ ಕೃತ್ಯಗಳು 1ರಲ್ಲಿ ಆಕೆಯ ಹೆಸರನ್ನು ಗಮನಿಸಿದ ನಂತರ, ಹೊಸ ಒಡಂಬಡಿಕೆಯಲ್ಲಿ ಆಕೆಯ ಹೆಸರನ್ನು ಇನ್ನೆಲ್ಲಿಯೂ ದಾಖಲು ಮಾಡಿರುವದಿಲ್ಲ. ಇತರೆ 21 ಪತ್ರಿಕೆಗಳಲ್ಲಿಯೂ ದಾಖಲಿಸಿರುವದಿಲ್ಲ. ಆಕೆಯ ಹೆಸರು ಅಗತ್ಯವಿದೆ ಎಂದು ಯಾವುದೇ ಬರಹಗಾರರು ತಿಳಿಸಿರುವದಿಲ್ಲ. ಅನಗತ್ಯ ಆರಾಧನೆ ಎಂಬ ಕವಚವನ್ನು ತೆಗೆದು ಹಾಕಬೇಕು.[13]

## ಶಾಶ್ವತವಾದ ಕನ್ಯತ್ವ ಎಂಬ ಸಿದ್ಧಾಂಥ

ಈಗ ಅಂತಿಮವಾದ ಕವಚವನ್ನು ತೆಗೆಯುವ ಹಂತಕ್ಕೆ ಬಂದಿದ್ದೇವೆ. ಇದು ಬಹಳ ಗಂಭೀರವಾದ ಕವಚವಾಗಿರುವದರಿಂದ, ಸೂಕ್ಷ್ಮ ಚಿಂತನೆ ಅಗತ್ಯವಿದೆ. ಅನೇಕರಿಗೆ ಇದು

ಮರಿಯಳ ಪರವಾದ ಆಲೋಚನೆಯಾಗಿದೆ. ಈ ಸಿದ್ಧಾಂಥಕ್ಕೆ ವಿರೋಧ ಪಡಿಸುವದು, ಮರಿಯಳಿಗೆ ವಿರೋಧ ಎಂಬುದು ಅವರ ಆಲೋಚನೆ. ಶಾಶ್ವತವಾದ ಕನ್ಯತ್ವ ಎಂಬ ಸಿದ್ಧಾಂಥ. ಇದು ಬಹು ಹಳೆಯ ಕವಚವಾಗಿದೆ. ಅವು ಅಪೊಸ್ತಲರ ಮೂಲ ತತ್ವಕ್ಕೆ ಬಹುದೂರವಾಗಿದೆ. ಐದನೇ ಶತಮಾನದಲ್ಲಿ ಇದು ಆರಂಭವಾಗಿ ಏಳನೇ ಶತಮಾನದಲ್ಲಿ ಈ ತತ್ವದ ಬೋಧನೆ ಮುಂದುವರೆಯಿತು.

ಹೊರ ತೋರಿಕೆಗೆ ಈ ತತ್ವವು ಸರಳವಾಗಿರಬಹುದು, ಆದರೆ ಮರಿಯಳು ಕನ್ಯೆ ಯಾಗಿ ಮುಂದುವರೆದಳೋ ಅಥವಾ ಇಲ್ಲವೋ ಎಂಬುದು ಚರ್ಚೆಯಾಗಬೇಕಿದೆ? ಸತ್ಯವೇದದಲ್ಲಿ ಈ ವಿಚಾರವು ಇಲ್ಲದೆ ಇರುವದರಿಂದ, ಇದರ ಚರ್ಚೆ ಅಗತ್ಯವಿದೆ. ಯೇಸು ಜನಿಸುವಾಗ ಆಕೆ ಕನ್ಯೆಯಾಗಿದ್ದಳು (ಮತ್ತಾಯ 1:23, 25), ಆಕೆ ಹಾಗೆಯೇ ಮುಂದುವರೆದಿರುವ ವಿಚಾರದಲ್ಲಿ ಪ್ರಶ್ನೆಗಳಿವೆ. ಮರಿಯಳು ಮತ್ತು ಯೋಸೇಫ ಗಂಡ ಹೆಂಡತಿಯಾಗಿ ಮುಂದುವರೆದರು ಎಂದು ವೇದವು ತಿಳಿಸುತ್ತದೆ.[14] ಮತ್ತಾಯ 1:25ರಲ್ಲಿ, "ಆಕೆಯು ಗಂಡು ಮಗನನ್ನು ಹಡೆಯುವ *ತನಕ* ಯೋಸೇಫನು ಆಕೆಯನ್ನು ಅರಿಯಲಿಲ್ಲ" (ಒತ್ತಿ ಹೇಳಿದ್ದು ನನ್ನದು ಮತ್ತಾಯ 1:18). ಮತ್ತಾಯ 13:55, 56ರಲ್ಲಿ ಯೇಸು ಇತರೆ ಸಹೋದರ ಸಹೋದರಿಯರನ್ನು[15] ಹೊಂದಿದ್ದನು ಎಂದು ಬರೆದದೆ. ಮರಿಯಳು ಮತ್ತು ಯೋಸೇಫ ಇಬ್ಬರು ಗಂಡ ಹೆಂಡತಿಯರಾಗಿ ಜೀವಿಸಿ, ಅನೇಕ ಮಕ್ಕಳನ್ನು ಪಡೆದಿದ್ದರು ಎಂಬದು ಅಂತಿಮವಾದ ಯೋಚನೆಯಾಗಿದೆ.[16]

ಮರಿಯಳ ಕನ್ಯತ್ವದ ಬಗ್ಗೆ ಮಾತನಾಡುವದಾದರೆ, ಮದುವೆಯಾಗದೆ ಇರುವದು ಮದುವೆಯಾಗುವದಕ್ಕಿಂತ ಪರಿಶುದ್ಧವಾದ ಸಂಗತಿ ಎಂಬದು ಕೆಲವರ ಅಭಿಪ್ರಾಯ. ಪರಿಶುದ್ಧರಾಗಿ ಜೀವಿಸಬೇಕೆಂದಿರುವವರು ಮದುವೆಯಾಗಬಾರದು ಎಂಬದು ಒಂದು ಭ್ರಷ್ಟತೆ ಎಂದು ಪೌಲನು ಮುಂತಿಳಿಸಿರುವನು:

> ಆದರೂ ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನುಡಿಗಳಿಗೂ ದೆವ್ವಗಳ ಬೋಧನೆಗಳಿಗೂ ಲಕ್ಷ್ಯಕೊಟ್ಟು ಕ್ರಿಸ್ತನಂಬಿಕೆಯಿಂದ ಭ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತಾನೆ. ಸುಳ್ಳುಬೋಧಕರು ಒಂದು ಸ್ವಂತ ಮನಸ್ಸಿನಲ್ಲಿ ಅಪರಾಧಿಗಳೆಂಬ ಒರೆಯುಳ್ಳವರಾದರೂ ತಾವು ನೀತಿವಂತರೆಂದು ತೋರ್ಪಡಿಸಿ ಕೊಂಡು *ಅವರನ್ನು ಮರುಳುಗೊಳಿಸಿ ಮದುವೆಯಾಗಬಾರದೆಂತಲೂ ಇಂಥಿಂಥ ಆಹಾರವನ್ನು ತಿನ್ನಬಾರದೆಂತಲೂ ಹೇಳುವರು* … (1 ತಿಮೋಥೆ 4:1-3; ಒತ್ತಿ ಹೇಳಿದ್ದು ನನ್ನದು).

ದಾಂಪತ್ಯವು ಮಾನ್ಯವಾದದೆಂದು ಎಲ್ಲರು ತಿಳಿಯಬೇಕು, ಎಂದು ವಾಕ್ಯವು ತಿಳಿಸುತ್ತದೆ (ಇಬ್ರಿಯ 13:4). KJVಯಲ್ಲಿ, ಮದುವೆಯು ಗೌರವವುಳ್ಳದ್ದು, ಮದುವೆಯ ಹಾಸಿಗೆಯು ಶುದ್ಧವಾಗಿರಬೇಕು ಎಂದಿದೆ. ಮರಿಯಳು ಮಹಾ ನಿಷ್ಕಳಂಕಳು ಎಂಬ ತತ್ವವನ್ನು ನಾವುಗಳು ಅನುಮೋದಿಸುವಿಲ್ಲ. ನಿಷ್ಕಳಂಕ ಕನ್ಯೆ ಎಂಬ ಅಭಿಪ್ರಾಯದ ಕವಚವನ್ನು ನಾವುಗಳು ತೆಗೆದುಹಾಕಬೇಕು.

---

ಟಿಪ್ಪಣೆಗಳು

[1]ಗಲಾತ್ಯ 4:4 "ಸ್ತ್ರೀ"ಯಲ್ಲಿ ಹುಟ್ಟಿದವನು ಎಂಬುದಕ್ಕೆ ಪರೋಕ್ಷವಾಕ್ಯವಾಗಿದೆ. [2]ಮರಿಯಳು ಯೇಸುವಿನೊಂದಿಗೆ ಸಹ ವಿಮೋಚಕಳು ಎಂಬ ತತ್ವವಿದೆ. [3]"ಬುಲ್" ಎಂಬುದು ರೋಮನ್ ಪೋಪರ್ ಒಂದು ಹೇಳಿಕೆ. [4]ಪ್ರತಿಯೊಂದು ಸಿದ್ಧಾಂಥವನ್ನು "ಸಭೆಯು" ನಂಬಿ ಅನುಮೋದಿಸುತ್ತದೆ. ಅದು ಸತ್ಯವಾಗಿದ್ದರೆ, ಅದರ ಬೋಧನೆಯು ನಮಗೆ ಸ್ಪಷ್ಟ ಇರಬೇಕಿತ್ತು, ಮತ್ತು ಬರಹದಲ್ಲಿರಬೇಕಿತ್ತು, ಇದು ಗ್ರಂಥಗಳಲ್ಲಿರುವದಿಲ್ಲ (2 ತಿಮೋಥೆ 3:16, 17). "ಕ್ರಿಸ್ತನ ನೀತಿಯಿಂದ ನಮ್ಮೊಂದಿಗೆ

ಅಮೂಲ್ಯವಾದ ನಂಬಿಕೆಯನ್ನು ಹೊಂದಿದವನು'' (2 ಪೇತ್ರ 1:3). [5]ಮರಿಯಳು ಏರಿ ಹೋದಳು ಎಂದು ಯೇಸು ಬೋಧಿಸಿದ್ದಾನೆ ಎಂದು ಯಾರಾದರು ಹೇಳಿದರೆ, ಅವರಿಗೆ ಈ ಕೆಳಗಿನ ವಿಚಾರವನ್ನು ತಿಳಿಸಿ: (1) ಯೇಸುವಿನ ಮಾತುಗಳು ಪ್ರವಾ ದನೆಯಾಗಿದೆ. ಭವಿಷ್ಯತ್ತಿನ ಕುರಿತಾಗಿ ಭೂತಕಾಲದಲ್ಲಿ ಮಾತಾಡಿರುವವನು. (2) ಯೇಸುವಿನ ಮಾತುಗಳನ್ನು ಯೋಹಾನನು ಕ್ರಿ.ಶ. 90ರಲ್ಲಿ ಬರೆದನು - ಮರಿಯಳು ಗತಿಸಿದ ಅನೇಕ ವರ್ಷಗಳ ನಂತರ. [6]ಇಮ್ಮಾಕ್ಯೂಟೇಲ್ - ಎಂದರೆ ಪವಿತ್ರ, ನಿಷ್ಕಳಂಕ, ಪರಿಶುದ್ಧ, ಕಲೆರಹಿತ. [7]ಮರಿಯಳನ್ನು ಆರಾಧಿಸುವದಿಲ್ಲ ಎಂಬ ಹೇಳಿಕೆಯಿದೆ - ದೇವರ ಹಾಗೂ ಮರಿಯಳ ಮುಂದೆ ಅಡ್ಡಬೀಳುವ ಪ್ರಕ್ರಿಯೆಗಳ ವಿಭಿನ್ನ ಪದಗಳನ್ನು ಬಳಸಲಾಗಿದೆ. ಕೆಥೋಲಿಕರ ಬೋಧನೆ ಅಥವಾ ಅಧಿಕಾರಿಗಳ ಮಾತುಗಳು ಏನೇ ಇದ್ದರು ಮರಿಯಳನ್ನು ಅವರು ಆರಾಧಿಸುವವರಾಗಿದ್ದಾರೆ. [8]''ಮರಿಯೇಲೇಟರಿ'' ಎಂದರೆ ಮರಿಯಳು ''ರಾಣಿ'' ಎಂದು ಹೇಳುವ ಹಬ್ಬ ಅದು 1955ರಲ್ಲಿ ಸ್ಥಾಪನೆಯಾಯಿತು. [9]ಹೊಸ ಒಡಂಬಡಿಕೆಯಲ್ಲಿ ಮರಿಯಳನ್ನು ''ನನ್ನ ಕರ್ತನ ತಾಯಿ'' ಎನ್ನಲಾಗಿದೆ (ಲೂಕ 1:43). ಮತ್ತು ಯೇಸುವಿನ ತಾಯಿ (ಯೋಹಾನ 2:1), ಆದರೆ ''ದೇವರ ತಾಯಿ'' ಎಂದಿರುವದಿಲ್ಲ. ಯೇಸುವಿನ ದೈವತ್ವವು ''ನಿತ್ಯಾವಾದದ್ದು'' (ಯೋಹಾನ 1:1-3; ಇಬ್ರಿಯ 1:10-12). ಆತನು ಎಂದಿಗೂ ಮರಿಯಳನ್ನು ಅವಲಂಭಿಸಿರಲಿಲ್ಲ, ಮರಿಯಳಿಂದ ದೈಹೀಕ ದೇವಷ್ಟೆ (ರೋಮಾಪುರ 1:3; ಯೋಹಾನ 3:6). [10]''ಮಿಡಿಯಾಟ್ರಿಕ್ಸ್'' ಅಂದರೆ ''ಹೆಣ್ಣು ಮಧ್ಯವರ್ತಿ.''

[11]ದೇವರು ಕಠಿಣವಾದ ತೀರ್ಪು ನೀಡುವನು ಎಂಬ ಭಯದಿಂದ ಈ ಸಂಗತಿಗಳು ನಡೆದವು. [12]ಆಕೆಯು ಸ್ತ್ರೀಯಾದ್ದರಿಂದ ಗೌರವ ನೀಡುವ ಸಲುವಾಗಿ ಇದನ್ನು ಮಾಡಿದ್ದರು ದೇವರನ್ನು ಪುರುಷತ್ವದಲ್ಲಿ ಅರಿತಿದ್ದರೂ, ಸ್ತ್ರೀ ಪುರುಷರ, ಉತ್ತಮವಾದ ಸದ್ಗುಣಗಳನ್ನು ಆತನು ಹೊಂದಿರುವನು ಎಂದ ವಾಕ್ಯ ಹೇಳುತ್ತದೆ, ಆತನು ಅವರೆಡನ್ನು ಮೀರಿಸಿರುವನು ಯೆಶಾಯ 49:15. [13]ದೈಹೀಕ ಸಂಬಂಧಕ್ಕಿಂತಲೂ, ಆತ್ಮೀಕ ಸಂಬಂಧವು ಬಹು ಪ್ರಮುಖ ಎಂದು ಯೇಸು ತನ್ನ ಜೀವಿತಾವಧಿಯಲ್ಲಿ ತಿಳಿಸಿರುವನು, ತನ್ನ ತಾಯಿಯನ್ನು ಕುರಿತು ಸಹ ಹೇಳಿರುವನು (ಮತ್ತಾಯ 12:47-50; ಲೂಕ 11:27, 28). [14]ಇಬ್ರಿಯರ ಪ್ರಕಾರ ಒಬ್ಬಳು ಗರ್ಭಿಣಿಯಾಗುವವರೆಗೂ, ಅವಳ ಮದುವೆಯನ್ನು ಊರ್ಜಿತ ಮಾಡುತ್ತಿರಲಿಲ್ಲ, ಮದುವೆಯ ಸಂಬಂಧಲ್ಲಿ ಪತಿ ಪತ್ನಿಯರು ಸಮಪಾಲು (1 ಕೊರಿಂಥ 7:3-5). [15]ಒಂದ ತಾಯಿಯಾದದರಿಂದ ಅರ್ಧ ಸಹೋದರ, ಅರ್ಧಸಹೋದರಿಯಾಗಿದ್ದರು. ಆದರೆ ಒಂದೇ ತಂದೆಯಾಗಿರಲಿಲ್ಲ (ದೇವರೇ ಯೇಸುವಿನ ತಂದೆಯಾಗಿದ್ದನು, ಯೇಸೇಫನು ಅವರ ತಂದೆಯಾಗಿದ್ದನು). [16]ಯೋಸೇಫನ ಹಿಂದಿನ ಮದುವೆಯ ಸಂಬಂಧದ ಮಕ್ಕಳು ಅಥವಾ, ಯೇಸುವಿನ ದೊಡ್ಡಪ್ಪನ ಮಕ್ಕಳು, ಯೇಸುವಿಗೆ ಇತರೆ ಅಣ್ಣಂದಿರಿದ್ದರೆ, ಅವರಲ್ಲಿ ಒಬ್ಬನೋ ದಾವೀದನ ಸಿಂಹಾಸನ ಏರುವ ಬಾಧ್ಯಸ್ಥನಾಗುತ್ತಿರಲಿಲ್ಲವೇ.

# ಯೋಸೇಫನ ಕುರಿತ ಪ್ರಸಂಗ

ನಮ್ಮ ಉಪದೇಶಗಳಲ್ಲಿ ಮರಿಯಳ ಕುರಿತ ಅಲಕ್ಷ್ಯ ತೋರುವದಾದರೆ, ಯೋಸೇಫನನ್ನು ಎರಡು ಪಟ್ಟು ಅಲಕ್ಷ್ಯಮಾಡುವವರಾಗಿದ್ದೇವೆ.

**ಪ್ರಸಂಗ 1:**

## ದೇವರು ತನ್ನ ಮಗನನ್ನು ಸಾಕುವದಕ್ಕಾಗಿ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿದನು

ಕೆಲವು ಸಾರಿ ನಮ್ಮ ಕುಟುಂಬದ ಸಮಸ್ಯೆಗಳು ಉದ್ಭವಿಸುವಾಗ, ನಮ್ಮ ಮಕ್ಕಳನ್ನು ಇತರರ ಜವಾಬ್ದಾರಿಗೆ ನೀಡಿದ್ದೆವು. ಇದು ಒಂದು ಗಂಭೀರ ಪರಿಸ್ಥಿತಿಯಾಗಿದ್ದರೂ ಆ ಜವಾಬ್ದಾರಿಯನ್ನು ಯಾರಿಗೂ ನೀಡಲಿಲ್ಲ. ಇಂತಹ ಸಂದರ್ಭದಲ್ಲಿ ಈ ಕೆಲಸಕ್ಕೆ ನೀವು ಯಾರನ್ನು ಬಯಸುವಿರಿ? ಆ ವ್ಯಕ್ತಿಯಲ್ಲಿ ಯಾವ ಯಾವ ಸದ್ಗುಣಗಳನ್ನು ಬಯಸುವಿರಿ?

ಈ ಯೋಚನೆಯನ್ನು ಯೋಸೇಫನಿಗೆ ಹೋಲಿಸಿರಿ - ನಾವು ಬಯಸುವ ಸದ್ಗುಣಗಳನ್ನು ಪಟ್ಟಿ ಮಾಡಬಹುದೇ? ಈ ಮುಂದಿನ ಆಲೋಚನೆಗಳಿಂದ ಮುಂದುವರೆಯೋಣ: ಅವನು ದೇವರ ಮಗುವಾಗಿದ್ದ (ಒಬ್ಬ ಯೆಹೂದ್ಯ); ಅವನು ನೀತಿವಂಥ (ಮತ್ತಾಯ 1:19; ದೇವರ ಮಕ್ಕಳೆಲ್ಲರೂ ನೀತಿವಂಥರಲ್ಲ); ಅವನು ಯಾರಿಗೂ ನೋವುಂಟು ಮಾಡಲಿಲ್ಲ (1:19); ಅವನು ದೇವರನ್ನು ನಂಬಿದ್ದನು, ಅವನು ಧೈರ್ಯವಂಥನು (ಭಯಪಡಲಿಲ್ಲ; ನೋಡಿ 1:20). ಎಲ್ಲಕ್ಕಿಂತ ಮಿಗಿಲಾಗಿ ವಿಧೇಯ; ದೇವರು ಅವನೊಂದಿಗೆ ಮಾತನಾಡಿದಾಗಲೆಲ್ಲ, ವಿಧೇಯನಾದನು.

ಯೋಸೇಫನ ಜೀವನ ಚರಿತ್ರೆಯಲ್ಲಿನ, ಅವನ ಹಾಗೂ ಯೇಸುವಿನ ಸಂಬಂಧವನ್ನು ಗಮನಿಸಿ, ತಂದೆ ತಾಯಿಗಳಿಗೆ ಹಳೆ ಒಡಂಬಡಿಕೆಯು ನೀಡಿರುವ ಮಕ್ಕಳ ಕುರಿತಾದ ಮಾರ್ಗದರ್ಶನವನ್ನು ನೆನಪುಮಾಡಿರಿ. ಧರ್ಮೋಪದೇಶಕಾಂಡ 6:6, 7, 20, 21ರಲ್ಲಿ ತಂದೆಗಳು ತಮ್ಮ ಮಕ್ಕಳಿಗೆ ನೀಡಬೇಕಾದ ಪ್ರಾಥಮಿಕ ಕರ್ತವ್ಯವನ್ನು ತಿಳಿಸಲಾಗಿದೆ.

**ಪ್ರಸಂಗ 2:**

## ಈ ಮನುಷ್ಯನ ಜೀವಿತ ಬದಲಾಗಿತ್ತು

“ಯೋಸೇಫನು ನಿದ್ದೆಯಿಂದ ಎದ್ದು ದೇವದೂತನು ಅವನಿಗೆ ತಿಳಿಸಿದಂತೆ ಮಾಡಿದನು ...” (ಮತ್ತಾಯ 1:24). ದೇವರು ತಿಳಿಸಿದಂತ ಕಾರ್ಯಗಳನ್ನು ತಡಮಾಡದೆ ನೆರವೇರಿಸಿದ ಈ ಮನುಷ್ಯನ ಕುರಿತು ಯೋಚಿಸಿರಿ. “*ಈ* ಮನುಷ್ಯನು ಯಾರು?”

ಯೇಸುವಿನ ಜೀವನ ಚರಿತ್ರೆಯ ಚಿತ್ರಣದಲ್ಲಿ ಮರಿಯಳಂತೆ, ಪತ್ರದ ಯಜಮಾನನಂತೆ, ಕುರುಬರ ಹಾಗೆ, ಮೂಡಣ ಪಂಡಿತರ ಹಾಗೆಯೇ, ಯೋಸೇಫನು ತನ್ನ ಪಾತ್ರ ಮಾಡಿರುವನು. ಅವನು ವಿಶೇಷವಾದ ವ್ಯಕ್ತಿಯಾದ್ದರಿಂದ, ದೇವರು ತನ್ನ ಮಗನ ಜವಾಬ್ದಾರಿ ವಹಿಸಲು, ಅವನನ್ನು ಆಯ್ಕೆ ಮಾಡಿದನು.[1] ಅವನ ಸದ್ಗುಣಗಳಲ್ಲಿ ಮೊದಲನೆಯದಾಗಿ ಅವನು ದಾವೀದನ ನೇರ ವಂಶಸ್ಥನಾಗಿದ್ದನು. ನ್ಯಾಯಯುತವಾದ ವಂಶಪಾರಂಪರ್ಯೆಯನ್ನು ಯೆಹೂದ್ಯರು ವಿಶೇಷವೆಂದು ಪರಿಗಣಿಸಿದ್ದರು (ಬಹಳ ಪ್ರಮುಖ). ಯೋಸೇಫನ ಯೇಸುವಿನ ನಿಜವಾದ ತಂದೆ ಅಲ್ಲದಿದ್ದರೂ (ಲೂಕ 3:23), ಯೇಸುವಿನ ಮೂಲವನ್ನು ಯೋಸೇಫನ ಮುಖಾಂತರ ಒಬ್ಬ ಬರಹಗಾರನು ಕಂಡುಹಿದಿರುವನು (ಮತ್ತಾಯ 1:16). ಯೋಸೇಫನು ಬದಲಾಗಿದ್ದ ವ್ಯಕ್ತಿ ಎಂದು ನಾನು ಪರಿಗಣಿಸತ್ತೇನೆ, ಯಾಕಂದರೆ ಅವನು ಮರಿಯಳೊಂದಿಗೆ ಮದುವೆಯಾಗಿದ್ದನು. ಮಗುವಾದ ಯೇಸು ಅವನ ಜೀವಿತಕ್ಕೆ ಬಂದಿದ್ದನು.

## ಯೋಸೇಫನ ಜೀವಿತದಲ್ಲಾದ ಬದಲಾವಣೆಗಳು

(1) *ಸ್ಥಳ ಬದಲಾವಣೆ.* ಯೋಸೇಫನ ನಜರೇತಿನ ಒಬ್ಬ ಬಡ ಬಡಗಿಯಾಗಿದ್ದನು (ಮತ್ತಾಯ 2:23; 13:55; ಲೂಕ 2:4, 39). ಮರಿಯಳನ್ನು ಮದುವೆಯಾಗುವ ಮೊದಲು ಅವನು ಯೆರೂಸಲೇಮಿನಿಂದ ಮುಂದಾಗಿ ಪ್ರಯಾಣಿಸದೆ ಇರಬಹುದು (ಲೂಕ 2:41). ಅವರು ಮದುವೆಯಾದ ತಕ್ಷಣವೇ ಅವನನ್ನು ಅವನ ಹೊಸ ಹೆಂಡತಿಯನ್ನು ರೋಮಾಯದ ಚಕ್ರವರ್ತಿಯು ಯೆರೂಸಲೇಮಿನ ಬೆತ್ಲೆಹೇಮಿಗೆ ಹೋಗಬೇಕೆಂದು ಅಪ್ಪಣೆ ಮಾಡಿದನು. ಅಲ್ಲಿ ಯೇಸು ಜನಿಸಿದನು (ಲೂಕ 2:1-7).

ಕೆಲವು ದಿವಸಗಳ ನಂತರ, "ಯೇಸುವನ್ನು ಪ್ರತಿಷ್ಟ ಪಡಿಸಲು ಯೆರೂಸಲೇಮಿನ ದೇವಾಲಯಕ್ಕೆ ಕರಕೊಂಡು ಹೋದರು" (ಲೂಕ 2:21, 22). ನಂತರ ಅವರು ಬೆತ್ಲೆಹೇಮಿನಲ್ಲಿ ವಾಸಿಸಿದರು. ಯೋಸೇಫನು ಅಲ್ಲಿ ತನ್ನ ವ್ಯವಹಾರವನ್ನು ಮಾಡಿರಬಹುದು. ಅವರು ಅಲ್ಲಿರುವಾಗ, ಮೂಡಣ ದೇಶದ ಪಂಡಿತರು ಅವನ ಮನೆಗೆ ಬಂದು, "ಮಗುವನ್ನು ಆತನ ತಾಯಿಯಾದ ಮರಿಯಳೊಂದಿಗೆ ಕಂಡುಕೊಂಡರು" (ಮತ್ತಾಯ 2:11).

ಅರಸನಾದ ಕೋಪವು ಶಮನಗೊಳ್ಳುವವರೆಗೆ ಯೋಸೇಫನು ತಪ್ಪಿಸಿಕೊಂಡು ದೂರ ಪ್ರದೇಶವಾದ ಐಗುಪ್ತದಲ್ಲಿ ನೆಲೆಸಿದನು (ಮತ್ತಾಯ 2:1-18). ಅರಸನಾದ ಹೆರೋದನು ಮರಣ ಹೊಂದುವವರೆಗೆ ಪಿರಮಿಡ್‌ಗಳು ಇರುವ ಸ್ಥಳದಲ್ಲಿ ಅವರು ವಾಸಿಸಿದರು. ನಂತರ ದೇವರು ಅವರನ್ನು ಪಾಲೆಸ್ತೇನಿಗೆ ಕರೆದನು (ಮತ್ತಾಯ 2:19-21). ಅವರು ಬೆತ್ಲೆಹೇಮಿಗೆ ಬದಲಾಗಿ ನಜರೇತಿಗೆ ಹೋದರು, ಇಲ್ಲಿಯೇ ಇವರ ಪ್ರಯಾಣ ಆರಂಭವಾಗಿತ್ತು.

(2) *ಹೊಣೆಗಾರಿಕೆಯಲ್ಲಿ ಬದಲಾವಣೆ.* ಅವನ ಜೀವಿತದಲ್ಲಿ ಸ್ಥಳಗಳು ಬದಲಾದಂತೆ ಅವನ ಹೊಣೆಗಾರಿಕೆಯು ಸಹ ಬದಲಾಯಿತು. ಅವನು ಮರಿಯಳೊಂದಿಗೆ ಮದುವೆಯಾಗುವವರೆಗೆ, ಅವನು ಯಾವ ವಿಧವಾದ ಮರಗಳನ್ನು ಆಯ್ದುಕೊಳ್ಳಬೇಕೆಂಬ ನಿರ್ಧಾರ ಮಾಡಬೇಕಿತ್ತು. ಅವನು ನಜರೇತಿನಲ್ಲಿ ಮರಿಯಳ ಗಂಡನಾದ ನಂತರ, ಅವನು ತನ್ನ ಕುಟುಂಬದ ಹೊಣೆಯನ್ನು ಸರಿಯಾಗಿ ಹೊರಬೇಕಿತ್ತು. ಅವನು ಬೆತ್ಲೆಹೇಮಿಗೆ ಹೋದ ನಂತರ, ತನ್ನ ಚಿಕ್ಕ ಮಗುವನ್ನು ದೃಷ್ಟಿಸಿದಾಗ, ಜವಾಬ್ದಾರಿಯುಳ್ಳ ತಂದೆಯಾದನು. ಐಗುಪ್ತಕ್ಕೆ ತಪ್ಪಿಸಿಕೋ ಎಂದು ದೂತನು ಹೇಳಿದಾಗ, ಅಮೂಲ್ಯವಾದ ತನ್ನ ಮಗನ ಜವಾಬ್ದಾರಿ ಹೊತ್ತನು. ನಜರೇತಿಗೆ ತಲುಪಿದಾಗ, ಕ್ರಮವಾಗಿ ತನ್ನ ಕರ್ತವ್ಯವನ್ನು ನಿಬಾಯಿಸಿದನು.

ಮಗನಿಗೆ ಕೆಲಸ ಕಲಿಸದ ತಂದೆ ಅವನನ್ನು ಕಳ್ಳನನ್ನಾಗಿ ಮಾಡುವನು ಎಂದು ಯೆಹೂದ್ಯರು ನಂಬಿದ್ದರು. ಯೇಸು ಸುತ್ತಿಗೆಯನ್ನು ಬಳಸಲು ಆರಂಭಿಸಿದ ದಿನದಂದು ಯೋಸೇಫನು, ತನ್ನ ಮಗನ ಕೆಲಸಕ್ಕಾಗಿ ಒಂದು ಮೇಜನ್ನು ಸಿದ್ದಪಡಿಸಿರಬಹುದು (ಮಾರ್ಕ 6:3), ಆತ್ಮಿಕ ತರಬೇತಿಯು ಬಹು ಪ್ರಮುಖವಾದದ್ದೇ. ಯೋಸೇಫನು ತನ್ನ ಮಗನಿಗೆ ಹಳೇ ಒಡಂಬಡಿಕೆಯ ಕಥೆಗಳನ್ನು ಹೇಳಿ, ದೇವ ಮಂದಿರದ ಶಾಲೆಗೆ ಕರೆದೊಯ್ದಿರಬಹುದು (ಲೂಕ 4:16). ಮರಿಯಳ ಸಂಗಡ, ಯೋಸೇಫನು ಸಹ ಕೈ ಜೋಡಿಸಿದ್ದನು, ಆದ್ದರಿಂದ ಅವರು ಯಶಸ್ವಿಯಾದರು. "ಆ ಬಾಲಕನು ಬೆಳೆದು ಬಲಗೊಂಡು ಜ್ಞಾನದಿಂದ ತುಂಬಿದವನಾದನು: ಮತ್ತು ಆತನ ಮೇಲೆ ದೇವರ ದಯವಿತ್ತು" (2:40).[2]

## ನಿಮ್ಮ ಜೀವಿತದಲ್ಲಿನ ಬದಲಾವಣೆ

ಯೋಸೇಫನನಂತೆ ನೀವುಗಳು ಸ್ಥಳ ಬದಲಾವಣೆ ಮಾಡದೆ ಇರಬಹುದು,[3] ಆದರೆ ನಿಮ್ಮ ಜೀವಿತದಲ್ಲಿ ಖಂಡಿತವಾದ ಬದಲಾವಣೆ ಆಗುತ್ತದೆ.[4] ಬದಲಾವಣೆಗಳು ಸಮಾಧಾನ ತಾರದೆ ಇರಬಹುದು, ಆದರೆ ಅದನ್ನು ನಾವು ಒಪ್ಪಿಕೊಳ್ಳಲೇಬೇಕು.

ಕೆಲವರಿಗೆ ಬದಲಾವಣೆಯ ಅಗತ್ಯದ ಪರಿಗ್ರಹವೇ ಇರುವದಿಲ್ಲ: ಮಕ್ಕಳ ಸ್ವಭಾವವನ್ನು ಬಿಟ್ಟು, ಮಹತ್ವದ ಆಲೋಚನೆ ಮಾಡಲು ಮನಸ್ಸಿರುವದಿಲ್ಲ: ಅಂಥವರು ಸ್ವಾರ್ಥಿಗಳೇ

ತಮ್ಮ ಕ್ರಮವನ್ನು ಬದಲಾಯಿಸಿಕೊಳ್ಳದೆ, ಪೋಷಕರಾಗಲು ಬಯಸುತ್ತಾರೆ.[5] ಕೆಲವರು ಹೃದಯವನ್ನು ಬದಲಾಯಿಸಿಕೊಳ್ಳದೆ ಪರಲೋಕಕ್ಕೆ ಹೋಗಲು ಬಯಸುತ್ತಾರೆ.[6]

ವ್ಯಯಕ್ತಿಕವಾದ ಬದಲಾವಣೆ ಎಲ್ಲರಿಗೂ ಅಗತ್ಯವಿದೆ. ಕರ್ತನ ಸಾರೂಪ್ಯಕ್ಕೆ ಆಗುವದು ನಮಗೆ ಬಹುಪ್ರಮುಖವಾಗಿದೆ (2 ಕೊರಿಂಥ 3:18). ನಾವು ಕ್ರೈಸ್ತರಾದಾಗ ನೀರಿನ ಸಮಾದಿಯಾದ ದೀಕ್ಷಾಸ್ನಾನದಿಂದ "ನೂತನ ಜೀವದಿದ್ದೆಂದೆವು." ಅನಂತರ, ನಾವುಗಳು "ನೂತನ ಸೃಷ್ಟಿಗಳಾಗಿ" (ನೋಡಿ 2 ಕೊರಿಂಥ 5:17)[7] ಜೀವಿಸಲು ಸಾಧ್ಯವಾಗುತ್ತದೆ.

## ಮುಕ್ತಾಯ

ಯೋಸೇಫನು, ಜೀವಿತವನ್ನು ಬದಲಾಯಿಸಿಕೊಂಡ ವ್ಯಕ್ತಿ ಎಂದು ನಾನು ಕರೆದಿದ್ದೇನೆ. ದೇವರ ಶಕ್ತಿಯಿಂದ ಹೃದಯಗಳನ್ನು ಬದಲಾಯಿಸಿಕೊಂಡ ಜನರು ನಾವಾಗಿರಬೇಕು.

ತನಗೆ ಬಂದ ಬದಲಾವಣೆಗಳನ್ನು ಯೋಸೇಫನು ಸ್ವಿಕರಿಸಿದನು, ಆ ಬದಲಾವಣೆಯ ನಿಮಿತ್ತ ತನ್ನ ಜವಾಬ್ದಾರಿಗಳನ್ನು ಕ್ರಮಬದ್ಧವಾಗಿ ಈಡೇರಿಸಿದನು. ದೇವರು ತಿಳಿಸಿದಂತೆ ಪಾಲನೆ ಮಾಡಿದ ಯೋಸೇಫನಂತೆ ನಾವೆಲ್ಲರೂ ಇರೋಣ![8]

---

ಟಿಪ್ಪಣಿಗಳು

[1]ಕುಟುಂಬದ ಯಜಮಾನನು ಪ್ರಾಥಮಿಕ ಜವಾಬ್ದಾರಿಯನ್ನು ನೆರವೇರಿಸಬೇಕೆಂಬ ಅಧಿಕಾರವನ್ನು ದೇವರು ನೀಡಿರುವನು (ಎಫೆಸ 6:4). [2]ಯೇಸು 12 ವರ್ಷದವನಾದಾಗ, ದೇವಾಲಯದಲ್ಲಿ ಇದ್ದ ನಿದರ್ಶನವನ್ನು ನೀಡಬಹುದು. ಈ ರೀತಿಯಾಗಿ ಯೋಸೇಫನು ಮರಣ ಹೊಂದಿದನು ಎಂದು ವಿವರಿಸಬಹುದು. ಸಾಯುವ ಮೊದಲು, ತನ್ನ ಮಗನ ವಿಚಾರದಲ್ಲಿ ದೇವರು ನೀಡಿದ ಕರ್ತವ್ಯಗಳನ್ನು ಪಾಲಿಸಿದ್ದನು. [3]ತಮ್ಮ ಜೀವಿತಕಾಲದಲ್ಲಿ, ಅಮೇರಿಕ್ಕರು ಹಲವು ಬಾರಿ ಬದಲಾಯಿಸಿಕೊಳ್ಳುವರು. [4]ಸಾಮಾನ್ಯ ಜನರ ಜೀವಿತದಲ್ಲಿ, ವೃದ್ಧರಾಗುವಾಗ ಉಂಟಾಗುವ ಬದಲಾವಣೆಯ ಕರ್ತವ್ಯದ ಪಟ್ಟಿ ಮಾಡಿರಿ. [5]ಯೇಸು ಎಂಬ ಮಗುವನ್ನು ಅವನು ಮರಿಯಳಿಂದ ಪಡೆದಿದ್ದರಿಂದ, ಅವನ ಜೀವನ ಬದಲಾಯಿತು. ನಮ್ಮ ಮದುವೆಯ ಜೀವಿತದಲ್ಸಿ ದೇವರು ನೀಡಿದ ಕರ್ತವ್ಯಗಳಿಂದ ಉಂಟಾಗುವ ವಿಚಾರಗಳನ್ನು ಇದರೊಂದಿಗೆ ಹೋಲಿಸಬಹುದು. [6]ಪಶ್ಚಾತ್ತಾಪದ ಮುಖಾಂತರ (ಲೂಕ 13:3; ಅಪೊಸ್ತಲರ ಕೃತ್ಯಗಳು 2:38; 17:30) ಬದಲಾವಣೆ ಹೊಂದಿ ರಕ್ಷಿಸಲ್ಪಡುತ್ತೇವೆ. [7]ಈ ಆಲೋಚನೆಯನ್ನು ವಿವರಿಸಬಹುದು. [8]ಸುವಾರ್ತೆಗೆ, ತಕ್ಷಣದಲ್ಲೇ ತೋರುವ ವಿಧೇಯತೆ ಎಂಬದು ನ್ಯಾಯಬದ್ಧವಾಗಿದೆ (ಅಪೊಸ್ತಲರ ಕೃತ್ಯಗಳು 2:37, 38, 41).

# ಕ್ರಿಸ್ತನು ಯಾವಾಗ ಜನಿಸಿದನು?

**ವರ್ಷ**

ಕ್ರಿಸ್ತನ ಜನನದ ದಿನದಿಂದ ಹೆಸರಿನ ಸಕಲ ಕ್ರೈಸ್ತರು ಲೆಕ್ಕಾಚಾರ ಮಾಡುವರು ಎಂದು 6ನೇ ಶತಮಾನದ ಡಿಯಾನಿಯಸ್ ಎಕ್ಸಿಗುಸ್ ಎಂಬ ಸನ್ಯಾಸಿಯು ತಿಳಿಸಿದ್ದಾನೆ. ರೋಮಾಯರ ಇತಿಹಾಸದ 753ರಲ್ಲಿ ಆತನ ಜನನವಾಯಿತು ಎಂದು ಕ್ರಿ.ಶ. 525ರಲ್ಲಿ ತಿಳಿಸಿದನು. ಅನೇಕ ವರ್ಷಗಳ ನಂತರ ಅವನು ನಾಲ್ಕು ಅಥವಾ ಐದು ವರ್ಷಗಳ ವ್ಯತ್ಯಾಸದ ಲೆಕ್ಕಾಚಾರವಾಗಿದೆ. ಎಂಬ ತಪ್ಪನ್ನು ಕಂಡುಕೊಂಡನು. ಆದರೆ ಪ್ರಪಂಚದ ಲೆಕ್ಕಾಚಾರವನ್ನೇ ಮುಂದುವರೆಸಿದನು. ಆದ್ದರಿಂದ (ಕ್ರಿಸ್ತಪೂರ್ವ) ಕೆಲವಾರು ವರ್ಷಗಳ ಹಿಂದೆಯೇ ಯೇಸುವಿನ ಜನನವಾಯಿತು ಎಂದು ನಿರ್ಣಯಿಸಬಹುದು!

ಯೇಸುವಿನ ಜನನದ ನಿಖರವಾದ ದಿನಾಂಕವನ್ನು ಸತ್ಯವೇದವು ತಿಳಿಸುವದಿಲ್ಲ. ಆದರೆ ಅದರಲ್ಲಿನ ಇತರೆ ಮಾಹಿತಿಗಳ ಮೂಲಕ ವರ್ಷವನ್ನು ನಿರ್ಧರಿಸಬಹುದಾಗಿದೆ.[1]

(1) 750ರ ವಸಂತ ಕಾಲದಲ್ಲಿ ಹೆರೋದ ಮಹಾರಾಜನು ಮರಣ ಹೊಂದಿದನು ಎಂಬ ಐತಿಹಾಸಿಕ ದಾಖಲೆಯಿದೆ. (ರೋಮಾಯರ ಲೆಕ್ಕದಂತೆ) ಈ ಲೆಕ್ಕದಂತೆ ಯೇಸು ಆರು ತಿಂಗಳ ಹಿಂದೆ ಜನಿಸಿದ್ದನು[2] ಅಂದರೆ 749ರಲ್ಲಿ (ಡಿಯೋನಿಯಸನ ಲೆಕ್ಕದಂತೆ).

(2) ತಿಬೇರಿಯದ ಕೈಸರನ ಆಡಳಿತದ 15ನೇ ವರ್ಷದಲ್ಲಿ, ಸ್ನಾನಿಕನಾದ ಯೋಹಾನನು ಸೇವೆಯನ್ನು ಆರಂಭಿಸಿದನು ಎಂದು ಲೂಕನು ಬರೆದನು (ಲೂಕ 3:1ಎ). ಲೂಕನ ಪ್ರಕಾರ 765, ತಿಬೇರಿಯನ ಆಡಳಿತವಾಗಿತ್ತು.[3] ಸ್ನಾನಿಕನಾದ ಯೋಹಾನನು ಸೇವೆ ಮಾಡಲು ಆರಂಭಿಸಿದಾಗ ಮುವತ್ತು ವರ್ಷ ಪ್ರಾಯದವನಾಗಿದ್ದನು,[4] ಅಂದರೆ ಯೋಹಾನನು 750ರಲ್ಲಿ ಜನಸಿದ್ದರೆ, ಆರು ತಿಂಗಳ ನಂತರ ಯೇಸು ಜನಿಸಿರಬಹುದು.

(3) ಯೇಸುವಿನ ಸಾರ್ವಜನಿಕ ಸೇವಾ ಕಾಲದಲ್ಲಿ ಜರುಗಿದ ಪಸ್ಕದ ಸಮಯದಲ್ಲಿ, 46 ವರ್ಷಗಳ ಹಿಂದೆ ಹೆರೋದನು ದೇವಾಲಯವನ್ನು ಕಟ್ಟಲು ಆರಂಭಿಸಿದನು (ಯೋಹಾನ 2:20). 735ರಲ್ಲಿ ಹೆರೋದನು ಈ ಯೋಜನೆ ಆರಂಭಿಸಿದನು ಎಂಬ ದಾಖಲೆಯಿದೆ, ಅಂದರೆ ಯೋಹಾನ 2ರ ಕಾರ್ಯಗಳು 781ರಲ್ಲಿ ಜರುಗಿರಬಹುದು. ಹಾಗಾದರೆ ಯೇಸುವಿನ 31ನೇ ವಯಸ್ಸಿನಲ್ಲಿ ಆ ಪಸ್ಕವು ನಡೆದಿತ್ತು, ಅಂದರೆ ಯೇಸುವಿನ ಜನನ 750ರಲ್ಲಿ ಆಗಿರಬಹುದು.

ಈ ಎಲ್ಲಾ ಲೆಕ್ಕಾಚಾರದ ಪ್ರಕಾರ, ಯೇಸುವಿನ ಜನನವು ರೋಮಾನ್ನರ ಲೆಕ್ಕದ ಪ್ರಕಾರ 750 ಅಥವಾ 749ರಲ್ಲಿ ಆಗಿರಬಹುದು - ಕ್ರಿ.ಪೂ. 4 ಅಥವಾ 5ರಲ್ಲಿ ಆಗಿರಬಹುದು.

**ಆ ವರ್ಷದ ಸಮಯ**

ಕ್ರೈಸ್ತತ್ವವು ಆರಂಭವಾದಾಗಿನಿಂದ, ಜನವರಿ 5, ಎಪ್ರಿಲ್ 20, ಮೇ 20 ಮತ್ತು ಡಿಸೆಂಬರ್ 25ನ್ನು ಕ್ರಿಸ್ತ ಜನನದ ದಿನಾಂಕವನ್ನಾಗಿ ಮಾಡಿರುವರು ಎಂದು D. ಜಾರ್ಜ್ ವಂಡಲ್ಅಪ್‌ರವರು ತಿಳಿಸಿರುವರು.

> ಯೇಸುವಿನ ಜನನದ ದಿನವು ನಿಖರವಾಗಿರುವದಿಲ್ಲ. ನಾಲ್ಕನೇ ಶತಮಾನದವರಗೆ, ಯೇಸುವಿನ ಜನನದ ಆಚರಣೆ ಇರಲಿಲ್ಲ. ರೋಮಾಯರ ಹಬ್ಬದ ದಿನದ ಬದಲಾಗಿ ಡಿಸಂಬರ್ 25ನ್ನು ನಿಗದಿಪಡಿಸಲಾಯಿತು, ರೋಮಾಯರ ಸೂರ್ಯ ದೇವತೆಯ ಹಬ್ಬದ ದಿನ ಇದಾಗಿತ್ತು.[5]

ಯೇಸುವಿನ ಜನನದ ಸಮಯದ ಅಧ್ಯಯನ ಮಾಡುವದಾದರೆ, ಆತನ ಜನನ ಚಳಿಗಾದಲ್ಲಿ ಇರಲಿಲ್ಲ. A. T. ರಾಬರ್ಟ್‌ಸನ್ ಪ್ರಕಾರ,

> ಡಿಸೆಂಬರ್ 25 ನಿಖರವಾದ ದಿನಾಂಕವಲ್ಲ, ಯಾಕಂದರೆ ಚಳಿಗಾಲದಲ್ಲಿ ಕುರುಬರು ಅಂದರೆ ನವಂಬರ್‌ನಿಂದ ಮಾರ್ಚ್‌ವರೆಗೆ ತಮ್ಮ ಕುರುಗಳನ್ನು ರಾತ್ರಿಯಲ್ಲಿ ಬೆಚ್ಚಗಿರುವ ಹಟ್ಟಿಗಳಲ್ಲಿ ಕೂಡಿರುತ್ತಿದ್ದರು. ಬೆತ್ಲೆಹೇಮಿನ ದಕ್ಷಿಣದಲ್ಲಿ ಡಿಸೆಂಬರ್ ತಿಂಗಳಲ್ಲಿ, ಬೆಟ್ಟ ಪ್ರದೇಶಗಳಲ್ಲಿ ಯಾರು ಇರುತ್ತಿರಲಿಲ್ಲ. ಅದು ಮಳೆಗಾಲವಾದ್ದರಿಂದ, ಯೋಸೇಫ ಮತ್ತು ಮರಿಯಳು, ನಜರೇತಿನಿಂದ ಬೆತ್ಲೆಹೇಮಿನವರೆಗಿನ ಅಂತರವನ್ನು ಕ್ರಮಿಸುವದು ಪ್ರಯಾಸಕರವಾಗಿತು.[6]

ಚಳಿಗಾಲದ ರಾತ್ರಿಗಳಲ್ಲಿ ಕುರುಬರು ಬೆಟ್ಟಗಳಲ್ಲಿ ತಮ್ಮ ಕುರಿಗಳ ಸಂಗಡ ಇಲ್ಲದೆ ಇದ್ದದರಿಂದ, ಯೇಸುವಿನ ಜನನವು ಚಳಿಗಾಲದಲ್ಲಿ ಆಗಲಿಲ್ಲ ಎಂಬದು H. I. Hester ರವರ ಹೇಳಿಕೆ, ಬೇಸಿಗೆಯ ಅಂತ್ಯದಲ್ಲಿ ಅಥವಾ ಮಳೆಗಾಲದ ಆರಂಭದಲ್ಲಿ ಆಗಿರಬಹುದು.[7]

ಸತ್ಯವೇದವು ಯೇಸುವಿನ ಜನನದ ಕುರಿತು ಹೆಚ್ಚಿನ ಮಾಹಿತಿ ನೀಡದೆ ಇರುವದರಿಂದ, ಅದಕ್ಕೆ ಹೆಚ್ಚು ಗಮನ ಹರಿಸುವ ಅಗತ್ಯವಿಲ್ಲ, ಆತನು ಯಾವಾಗ ಹುಟ್ಟಿದವನು ಎನ್ನುವದಕ್ಕಿಂತಲೂ, ಆತನು ಹುಟ್ಟಿರುವದೇ ಶ್ರೇಷ್ಟವಾದ ಸಂಗತಿಯಾಗಿದೆ.

---

ಟಿಪ್ಪಣಿಗಳು

[1]ಕುರೇನಿಯಯನು ಸಿರಿಯದ ಅಧಿಪತುಯಾಗಿದ್ದ ಸಂದರ್ಭದಲ್ಲಿ ಮೊದಲ ಖಾನೇಷುಮಾರಿಯಾಯಿತು ಎಂದು ಲೂಕನ ಹೇಳಿಕೆಯಿದೆ. ಮೊದಲ ಶತಮಾನದ ಓದುಗರು ಈ ಅಂಶವನ್ನು ಗಮನಿಸಿದ್ದರು. ಇದರ ಅಗತ್ಯತೆ ನಮಗಿರುವದಿಲ್ಲ ಏಕಂದರೆ, ಐತಿಹಾಸಿಕ ಮಾಹಿತಿಯು ತಪ್ಪಾಗಿರುತ್ತದೆ. ಖಾನೇಶುಮಾರಿ ಆಯಿತು ಎಂದು ತಿಳಿದರು ನಿಖರವಾದ ದಿನಾಂಕದ ಕುರಿ ಮಾಹಿತಿ ಲಭ್ಯವಿಲ್ಲ. [2]ಮುಂದಿನ ಪಾಠದಲ್ಲಿರುವ "ರಕ್ಷಕನ ಹುಡುಕಾಟ" ಎಂಬ ಪಾಠ ನೋಡಿರಿ. [3]765ರಲ್ಲಿ ತಿಬೇರಿಯನು, ಅಗಸ್ಟನ ಸಂಗಡ ಎರಡು ವರ್ಷ ಆಳಿದನು. [4]ಯೋಹಾನನು ಯಾಜಕ ವಂಶದವನು (ಲೂಕ 1:5), ಯಾಜಕನು ಮೂವತ್ತು ವಯಸ್ಸಿನವನಾದಾಗ ಸೇವೆ ಆರಂಭಿಸುತ್ತಿದ್ದನು (ಅರಣ್ಯಕಾಂಡ 4:3). ಯೇಸು ಮೂವತ್ತು ವರ್ಷದವನಾಗಿ ಸೇವೆ ಆರಂಭಿಸಿದ ಆದಿಯಲ್ಲಿ ಯೋಹಾನನು ಆರಂಭಿಸಿದನು (ಲೂಕ 3:23). [5]D. George Vanderlip, *Jesus of Nazareth, Teacher and Lord* (Valley Forge, Pa.: Judson Press, 1994), 67. [6]A. T. Robertson, *A Harmony of the Gospels for Students of the Life of Christ* (New York: Harper & Row, 1950), 267. [7]H. I. Hester, *The Heart of the New Testament* (Liberty, Mo.: Quality Press, 1963), 99.

# ಕ್ರಿಸ್ತನೇ ಸಾಕು

ಕ್ರಿಸ್ತನು ಸಕಲಕ್ಕೂ ಸಾಕು ...

ಕಲೆಗಾರ - ಅವನ ನುಡಿ ಬಹು ಇಂಪು (ಪರಮಗೀತ 5:16).
ವಾಸ್ತುಶಿಲ್ಪಿ - ಆತನೇ ಮೂಲೆಗಲ್ಲು (1 ಪೇತ್ರ 2:6).
ರೊಟ್ಟಿ ಮಾಡುವವನು - ಜೀವಕರವಾದ ರೊಟ್ಟಿ (ಯೋಹಾನ 6:51).
ಕಟ್ಟುವವನು - ಸ್ಥಿರವಾದ ಅಸ್ತಿವಾರ (ಯೆಶಾಯ 28:16; 1 ಕೊರಿಂಥ 3:11).
ಬಡಗಿ - ನಾನೇ ಬಾಗಿಲು (ಯೋಹಾನ 10:9).
ವೈಧ್ಯ - ಘನ ವೈದ್ಯ (ಮಾರ್ಕ 2:17).
ವಿದ್ಯುತ್ ಕೆಲಸಗಾರ - ನಾನೇ ಲೋಕಕ್ಕೆ ಬೆಳಕು (ಯೋಹಾನ 8:12).
ವ್ಯವಸಾಯಗಾರ - ಬಿತ್ತುವವನು ಹಾಗೂ, ಕೊಯ್ಲುಗಾರ (ಮತ್ತಾಯ 13:37; ಲೂಕ 10:2).
ಹಣ ತೊಡಗಿಸುವವ - ಅಪ್ರಮೇಯವಾದ ಐಶ್ವರ್ಯ (ಎಫೆಸ 3:8).
ಚಿನ್ನದ ಕೆಲಸಗಾರ - ಜೀವವುಳ್ಳ ಅಮೂಲ್ಯವಾದ ಕಲ್ಲು (1 ಪೇತ್ರ 2:4).
ವಕೀಲ - ಆಲೋಚನ ಕರ್ತನು, ನಿಯಮ ನೀಡುವವನು, ವಕೀಲನು (ಯೆಶಾಯ 9:6;
1 ಯೋಹಾನ 2:1).
ಸುದ್ದಿಗಾರ - ಮಹಾ ಸಂತೋಷದ ಸಮಾಚಾರ ತಿಳಿಸುವವನು (ಲೂಕ 2:10).
ಪ್ರಸಂಗಿ - ಆತನೇ ವಾಕ್ಯ (ಯೋಹಾನ 1:1).
ಸೇವಕ - ಒಳ್ಳೇಯ ಯಜಮಾನ (ಮತ್ತಾಯ 25:21, 23).
ಕೆಲಸಗಾರ - ವಿಶ್ರಾಂತಿ ನೀಡುವವ (ಮತ್ತಾಯ 11:28).
ಅಲೆಯುವವ - ಆತನೇ ಮಾರ್ಗ (ಯೋಹಾನ 14:6).

ಲೆನಾರ್ಡ್ ವಿ. ಬುಶ್‌ಮ್ಯಾನ್

# ವ್ಯಯಕ್ತಿಕ ಸೇವೆವನ್ನು ಕ್ರಿಸ್ತನು ಎಷ್ಟುಕಾಲ ಮಾಡಿದನು?

ಆತನು ಮೂರುವರೆ ವರ್ಷಗಳ ಕಾಲ ಸೇವೆ ಮಾಡಿದನು ಎಂಬುದು ಸಹಜ ಮಾಹಿತಿ. ಯೋಹಾನನ ಸುವಾರ್ತೆಯಲ್ಲಿ ನಾಲ್ಕು ಪಸ್ಕಗಳನ್ನು ದಾಖಲು ಮಾಡಿರುವದರಿಂದ ಮೂರುವರೆ ವರ್ಷಗಳನ್ನು ಊಹೆ ಮಾಡಿ ಹೇಳಲಾಗಿದೆ. ಯೋಹಾನನು ಮೂರು ಪಸ್ಕಗಳನ್ನು ದಾಖಲಿಸಿದ್ದಾನೆ: 2:13; 6:4; 13:1. "ಯೆಹೂದ್ಯರ ಹಬ್ಬ" ಎಂಬುದು ನಾಲ್ಕನೆಯ ಸಂಗತಿ (5:1), ಅದು ಒಂದು ವೇಳೆ ಪಸ್ಕ[1] ಅಲ್ಲದೆ ಇರಬಹುದು. ಇದು ಸಹ ಪಸ್ಕವೇ? ಎಂಬ ಚರ್ಚೆಯಿದೆ. ಆತನ ಸೇವೆಯು ಮೂರು ವರ್ಷಗಳಿಗೆ ಮಿತಿಗೊಂಡಿರಬಹುದು. ಯೇಸುವಿನ ಕಾಲದಲ್ಲಿ, ಒಂದು ಹೆಚ್ಚಿನ ಪಸ್ಕವಿರಬಹುದು, ಅದನ್ನು ಯೋಹಾನನು ತಿಳಿಸದೆ ಇರಬಹುದು, ಅಥವಾ ಆತನ ಸೇವೆ ನಾಲ್ಕು ವರ್ಷಗಳಿಗಿಂತ ಅಧಿಕವೂ ಆಗಿರಬಹುದು.

ಆತನು ಸೇವೆ ಮಾಡಿದ ಕಾಲಾವಧಿಯು ಪ್ರಮುಖವಾಗಿರದು; ಯಾಕೆಂದರೆ ದೇವರೇ ಅದನ್ನು ತಿಳಿಸಿರುವದಿಲ್ಲ. ಸ್ಪರ್ಷತೆಗಾಗಿ ಮಾತ್ರ ಮೂರುವರೆ ವರ್ಷಗಳ ಯೇಸುವಿನ ಸೇವಾವಧಿ ಎಂದಿರಬಹುದು. ರಾಬರ್ಟ್‌ಸನ್ ಪ್ರಕಾರ, ಯೇಸುವಿನ ಸೇವಾವಧಿ ಎರಡುವರೆ ಅಥವಾ ಮೂರುವರೆ ವರ್ಷಕಾಲಾವಧಿ ಇರಬಹುದು.

---

ಟಿಪ್ಪಣೆಗಳು

[1]A. T. Robertson, *A Harmony of the Gospels for Students of the Life of Christ* (New York: Harper & Row, 1950), 269-70. [2]Ibid., 270.

# "ಪರಲೋಕ ರಾಜ್ಯ"

ಸ್ನಾನಿಕನಾದ ಯೋಹಾನನು ಹಾಗೂ ಯೇಸು ಕ್ರಿಸ್ತನು, ಇಬ್ಬರೂ ಸಹ ಪರಲೋಕ ರಾಜ್ಯವು ಸಮೀಪವಾಯಿತು ಎಂದು ಪ್ರಸಂಗಿಸಿದರು (ಮತ್ತಾಯ 3:2; 4:17; 10:7). ಮತ್ತಾಯ , ಮಾರ್ಕ, ಲೂಕ ಹಾಗೂ ಯೋಹಾನ ಸುವಾರ್ತೆಗಳಲ್ಲಿ ನೂರು ಸಾರಿ[1] "ಪರ ಲೋಕ" ಎಂಬ ಪದವನ್ನು ಬಳಸಿರುವರು. ಈ ನಾಲ್ಕು ಸುವಾರ್ತೆಗಳ ಮಹತ್ವದ ವಿಚಾರವು ಇದೇ ಆಗಿರುತ್ತದೆ.

"ಪರಲೋಕ" ಎಂಬುದನ್ನು ಗ್ರೀಕ್ ಭಾಷೆಯಲ್ಲಿ "ಸಾರ್ವಭೌಮತ್ವ ಹಾಗೂ ಆಡಳಿತ" ಎನ್ನಲಾಗಿದೆ. ಕರ್ತನ ಆಡಳಿತದ ಕುರಿತಾಗಿಯೇ ಸುವಾರ್ತೆಗಳು ಒತ್ತು ನೀಡುತ್ತವೆ.

ಹೊಸ ಒಡಂಬಡಿಕೆಯಲ್ಲಿ "ಪಲೋಕ" ಎಂಬ ಪದವನ್ನು ಕಂಡುಕೊಂಡರು (ರೋಮಾಪುರ 14:17; 1 ಕೊರಿಂಥ 4:20), ಕ್ರಿಸ್ತನ ವ್ಯಯಕ್ತಿಕ ಸೇವಾ ಸಮಯದಲ್ಲಿ ಈ ಪದವನ್ನು ಬಳಸಲಾಗಿತ್ತು. ಒಬ್ಬ ಅರಸನು (ಮೆಸ್ಸಿಯನು) ಒಂದು ಯೆಹೂದ್ಯರನ್ನು ಆಳುವನು ಎಂದು ಶತಮಾನಗಳಿಂದ ಅವರು ಕಾಯುತ್ತಿದ್ದರು.

ಮೆಸ್ಸೀಯನ ರಾಜ್ಯದ ಕುರಿತು ಯೆಹೂದ್ಯರು ತಪ್ಪು ಅಭಿಪ್ರಾಯ ಹೊಂದಿದ್ದರು. ಅವರು ಲೌಕಿಕ ರಾಜ್ಯದ ಬಗ್ಗೆ ಯೋಚಿಸಿದ್ದರು. ನನ್ನ ರಾಜ್ಯವು "ಈ ಲೋಕದ್ದಲ್ಲಾ" ಎಂದು ಯೇಸು ತಿಳಿಸಿರುವನು (ಯೋಹಾನ 18:36). ಆತನು ಪಲೋಕ ಕುರಿತ ಅನೇಕ ಸಾಮ್ಯಗಳನ್ನು ಹೇಳಿದ್ದನು.[2] ಆತ್ಮೀಕ ರಾಜ್ಯದ ವಿವರಣೆ ನೀಡಲು ಅವುಗಳನ್ನು ಬಳಸಿದನು.

ರಾಜ್ಯದ ಕುರಿತು ಇತರೆ ಪದಗಳನ್ನು ಸಹ ಸುವಾರ್ತೆಗಳಲ್ಲಿ ಬಳಸಲಾಗಿದೆ. ಅದರಲ್ಲಿ "ದೇವರ ರಾಜ್ಯ" ಎಂಬುದು ಸಾಮಾನ್ಯ ಪದವಾಗಿದೆ (ಮತ್ತಾಯ 19:24; ಮಾರ್ಕ 4:26), 50ಕ್ಕಿಂತ ಹೆಚ್ಚು ಸಾರಿ ಬಳಸಲಾಗಿದೆ. ಮತ್ತಾಯನಿಗೆ "ಪರಲೋಕ ರಾಜ್ಯ" ಎಂಬ ಪದ ಮೆಚ್ಚಿಗೆಯಾಗಿತ್ತು (ಮತ್ತಾಯ 5:3, 10, 19). ಸುಮಾರು ಮೂವತ್ತಕಿಂತ ಹೆಚ್ಚು ಬಾರಿ ಪ್ರಯೋಗಿಸಿರುವನು. ಯೇಸು ಸಹ "ನನ್ನ ರಾಜ್ಯ" (ಲೂಕ 22:30; ಯೋಹಾನ 18:26) ಮತ್ತು "ನನ್ನ ತಂದೆಯ ರಾಜ್ಯ"ವೆಂದು (ಮತ್ತಾಯ 26:29), ಕೆಲವು ಸಾರಿ "ರಾಜ್ಯ"ವೆಂದು (ಮತ್ತಾಯ 4:23; 13:19) ಬಳಸಿರುವನು.

ಕೆಲವರು, ದೇವರ ರಾಜ್ಯ ಹಾಗೂ ಪರಲೋಕ ರಾಜ್ಯವನ್ನು ವಿಭಜನೆ ಮಾಡುವವರಾಗಿದ್ದಾರೆ. ಆದರೆ ಅವರು ಈ ವಿಚಾರದಲ್ಲಿ ಯಶಸ್ವಿಯಾಗಿರುವದಿಲ್ಲ. ಜಾನ್ ಕಾರ್ಟರ್‌ರವರು ಬರೆದು, "ಅವರ ಪ್ರಯತ್ನವು ವಿಫಲವೇ ಎಂದು ನಾನು ತಿಳಿದಿದ್ದೇನೆ ಮತ್ತು ಅವು ಮನುಷ್ಯ ಕಲ್ಪಿತವಷ್ಟೆ" ಎಂದಿರುವರು.[3] ಮತ್ತಾಯ 19:23, 24ರಲ್ಲಿ ಈ ಎರಡರಲ್ಲಿ ಆಂತರಿಕ ಬದಲಾವಣೆಯಾಗಿದೆ:

> ಆಗ ಯೇಸು ತನ್ನ ಶಿಷ್ಯರನ್ನು ನೋಡಿ, "ನಿಮಗೆ ಸತ್ಯವಾಗಿ ಹೇಳುತ್ತೇನೆ, ಐಶ್ವರ್ಯವಂತನು ಪರಲೋಕ ರಾಜ್ಯದಲ್ಲಿ ಸೇರುವದು ಕಷ್ಟ. ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಸೇರುವದಕ್ಕಿಂತ ಒಂಟೆಯು ಸೂಜಿಯ ಕಣ್ಣಿನಲ್ಲಿ ನುಗುವದು ಸುಲಭ ಎಂದು ನಿಮಗೆ ತಿರಿಗಿ ಹೇಳತ್ತೇನೆ ಅಂದನು (ಒತ್ತಿ ಹೇಳಿದ್ದು ನನ್ನದು.)

ಮತ್ತಾಯನು ತನ್ನ ಎಂಟು ವಾಕ್ಯ ಭಾಗಗಳಲ್ಲಿ "ಪರಲೋಕ ರಾಜ್ಯ" ಎಂದು ಬರೆದಿದ್ದರೆ, ಇತರರು "ದೇವರ ರಾಜ್ಯ" ಎಂದಿರುವರು (ಉದಾಹರಣೆ ಮತ್ತಾಯ 4:17ನ್ನು ಮಾರ್ಕ 1:14, 15 ರೊಂದಿಗೆ ಹೋಲಿಸಿ).

"ರಾಜ್ಯ" ಎಂಬ ಪದವನ್ನು ಹೊಸ ಒಡಂಬಡಿಕೆಯಲ್ಲಿ, ಇತರೆ ವಿಧಗಳಲ್ಲಿ ಬಳಸಲಾಗಿದೆ[4] ಆಗಾಗ್ಗೆ "ಪರಲೋಕ" ರಾಜ್ಯದ ಬಗ್ಗೆ ಬಳಸಲಾಗಿದೆ (ಅಪೊಸ್ತಲರ ಕೃತ್ಯಗಳು 14:22; 2 ಪೇತ್ರ

1:11), ರಾಜಾದಿ ರಾಜನ ಆಡಳಿತಕ್ಕೆ ಒಳಗಾದವರಿಗೆ ಸಬಂಧಿಸಿದೆ, ಅಂದರೆ ಹೃದಯಲ್ಲಿ[5] ಆತನ ಆಡಳಿತವನ್ನು ಹೊಂದಿದವರಿಗೂ ಸಂಬಂಧಿಸಿದೆ.

ಪತ್ರಿಕೆಗಳಲ್ಲಿ "ದೇವರ ರಾಜ್ಯವನ್ನು" "ಸಭೆಗೆ" ಹೋಲಿಸಲಾಗಿದೆ. ಸುವಾರ್ತೆಗಳಲ್ಲಿ "ರಾಜ್ಯ" ಎಂಬದು ಬಯಸಿದ ಪದವಾಗಿದ್ದರೆ, "ಸಭೆ" ಎಂಬದು ಪತ್ರಿಕೆಗಳ ಆಧ್ಯತೆ. ಅದನ್ನು ಎರಡು ವಿಧವಾದ ಆತ್ಮೀಕ ಸಂಗತಿ ಎಂದು ತಿಳಿಯಬೇಡಿರಿ. ಮತ್ತಾಯ 16:18ರಲ್ಲಿ ಯೇಸು ತನ್ನ ರಾಜ್ಯದ ಬಗ್ಗೆ ಅಂದರೆ ವಚನ 19 "ಸಭೆಗೆ" ರಾಜ್ಯ ಎಂಬ ಪದ ಬಳಕೆ ಮಾಡಿರುವನು.

ಕ್ರಿಸ್ತನ ಮರಣ, ಹೂಣುವಿಕೆ, ಹಾಗೂ ಪುನರುತ್ಥಾನದ ನಂತರ, ಹಾಗೂ ಪಂಚಾಶತ್ತಮ ದಿನದಂದು ಕ್ರಿಸ್ತನ ರಾಜ್ಯ/ಸಭೆ ಜನ್ಮ ತಾಳಿತು (ಮಾರ್ಕ 9:1; ಅಪೊಸ್ತಲರ ಕೃತ್ಯಗಳು 1:6-8; 2:1-4). ಅಂದಿನಿಂದ ಕ್ರಿಸ್ತನ ರಾಜ್ಯ ಆತನ ಸಭೆ ಅಸ್ತಿತ್ವದಲ್ಲಿದೆ (ಅಪೊಸ್ತಲರ ಕೃತ್ಯಗಳು 5:1; 8:1, 3; ಕೊಲೊಸ್ಸೆ 1:13; ಇಬ್ರಿಯ 12:28; ಪ್ರಕಟನೆ 1:6).

ದೇವರ ರಾಜ್ಯವು ಇನ್ನು ಸ್ಥಾಪನೆಯಾಗಿಲ್ಲ ಎಂದು ಕೆಲವರು ನಂಬಿರುತ್ತಾರೆ. ಎರಡು ಸಾವಿರ ವರ್ಷಗಳ ಹಿಂದೆಯೇ ದೇವರ ರಾಜ್ಯವು ಸಮೀಪವಾಯಿತು ಎಂದು, ಯೇಸು ಮತ್ತು ಯೋಹಾನ ಇಬ್ಬರೂ ತಿಳಿಸಿರುವರು (ಇಲ್ಲೇ ಇದೆ). ಆತನ ಕೇಳುಗರ ಜೀವಿತಾವಧಿಯಲ್ಲಿಯೇ ದೇವರ ರಾಜ್ಯವು ಬರುತ್ತದೆ ಎಂದು ಯೇಸು ಮುಂತಿಳಿಸಿದ್ದನು (ಮಾರ್ಕ 9:1). ದೇವರ ರಾಜ್ಯವು ಸಮೀಪದಲ್ಲೇ ಇದೆ ಎಂದು ವಾಕ್ಯವು ತಿಳಿಸದೆ, ಯೇಸು ದೇವರ ಬಳಿಗೆ ಹೋದ ತಕ್ಷಣವೇ ಅದು ಆರಂಭವಾಯಿತು ಎಂದು ಉಪದೇಶಿಸಿರಿ (ಅಪೊಸ್ತರ ಕೃತ್ಯಗಳು 2:29-36). ಯೇಸು ಈಗಾಗಲೇ ತನ್ನ ರಾಜ್ಯವನ್ನು ಆಳುತ್ತಿದ್ದಾನೆ, ಯುಗದ ಸಮಾಪ್ತಿಯ ವರೆಗೂ ಅದನ್ನು ಮುಂದುವರೆಸಿದವನು (1 ಕೊರಿಂಥ 15:24-27), ಆತನು ಒಂದು ತನ್ನವರನ್ನು ತನ್ನ ಬಳಿಗೆ ಸೇರಿಸುವವರೆಗೂ ಆಳುವನು (ಯೋಹಾನ 14:1-3).

ಸಭೆಯು ರಾಜ್ಯವು ಸ್ಥಾಪಿತವಾದ ನಂತರದವರೆಗೂ, "ರಾಜ್ಯ" ಎಂಬ ಪದದ ಬದಲು "ಸಭೆ" ಎಂಬುದನ್ನು ಹೆಚ್ಚು ಬಾರಿ ಬಳಸಿದ್ದರೂ, ದೇವರ ಸಭೆಯು ಅಪೊಸ್ತಲರ ಕೃತ್ಯಗಳು 2ರ ದೇವ ರಾಜ್ಯವೇ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಕ್ರಿಸ್ತನ ಜೀವನ ಚರಿತ್ರೆಯ ಮುಂದುವರೆದ ಭಾಗದಲ್ಲಿ "ಸಭೆ" ಎಂಬ ಪದವನ್ನು ಗಮನಿಸಿರಿ. ಆದ್ದರಿಂದ ಯಾವ ವಿಧ ವಾದ ಆತ್ಮೀಕ ವ್ಯಕ್ತಿ ಎಂಬುದನ್ನು ಅರಿಯುವಿರಿ.[6]

---

ಟಿಪ್ಪಣಿಗಳು

[1]ಮೂಲದಿಂದ ಮೂಲಕೆ ಸಂಖ್ಯೆಗಳಲ್ಲಿ ವ್ಯತ್ಯಾಸಗಳಿವೆ. [2]ಯೇಸುವಿನ ಅನೇಕ ಸಾಮ್ಯಗಳು "ಪರಲೋಕ ರಾಜ್ಯ" ಎಂದು ಆರಂಭವಾಗುತ್ತದೆ (ಉದಾಹರಣೆಗೆ ಮತ್ತಾಯ 13:31, 33, 44, 45, 47, 52ರಲ್ಲಿ ನೋಡಿ). [3]John Franklin Carter, *A Layman's Harmony of the Gospels* (Nashville: Broadman Press, 1961), 55. [4]ಉದಾಹರಣೆಗೆ ಯಾವುದೇ ರಾಜ್ಯಕ್ಕೂ "ರಾಜ್ಯ" ಎನ್ನುವರು (ಮತ್ತಾಯ 12:25). ಸೈತಾನನ ರಾಜ್ಯ ಮತ್ತಾಯ 2:26) ಇಸ್ರಾಯೇಲ್ ರಾಜ್ಯ (ಮತ್ತಾಯ 8:12; ಹಳೇ ಒಡಂಬಡಿಕೆಯ ಕಾಲದಲ್ಲಿ ಇಸ್ರಾಯೇಲ್ಯರ ದೇವರ ಪ್ರತ್ಯೇಕವಾದ ರಾಜ್ಯ), ಸಾಧಾರಣವಾಗಿ ದೇವರ ರಾಜ್ಯಕ್ಕೆ (ಮತ್ತಾಯ 6:13), ಈ ಪ್ರತಿಯೊಂದರಲ್ಲಿ ಪ್ರಥಮಿಕ ಅರ್ಥ "ರಾಜ್ಯ" ಎಂದರೆ "ಆಳ್ವಿಕೆ" "ಪರಿಪಾಲನೆ" ಎಂದರು. [5]"ರಾಜ್ಯ"ದ ಬಗ್ಗೆ ಹೆಚ್ಚಿನ ಮಾಹಿತಿಗಳಿಗೆ "ರಾಜ್ಯ/ಸಭೆ ಸ್ಥಾಪನೆ" ಎನ್ನುವ ಪಾಠವನ್ನು ಕಾರ್ಯಗ್ರಂಥ ಭಾಗ ಒಂದರಲ್ಲಿ ನೋಡಿ. [6]ಈ ಪ್ರಯೋಗ 2 ಪೇತ್ರ 3:11 ರಿಂದ ಹೊರಗಡೆ ತಂದಿದೆ. ಕಾರ್ಯಗ್ರಂಥ ಭಾಗ ಒಂದರಲ್ಲಿ ನೋಡಿ.

# ನೂತನ ಜನ್ಮ

"ಕೆಲವು ಜನರು ಒಂದೇ ಸಾರಿ ಹುಟ್ಟಿದರೂ ಎರಡು ಸಾರಿ ಸಾಯುತ್ತಾರೆ." ಇನ್ನು ಕೆಲವು ಜನರು ಎರಡು ಸಾರಿ ಹುಟ್ಟಿ ಒಂದು ಸಾರಿ ಸಾಯುತ್ತಾರೆ ಯೋಹಾನ 3:1-9 ರಲ್ಲಿ ಯೇಸುವಿನ ಮತ್ತು ನಿಕೋದೇಮನ ನಡುವಿನ ಸಂವಾದದಲ್ಲಿ ಈ ರಹಸ್ಯವನ್ನು ಬಯಲು ಮಾಡಲಾಗಿದೆ. ಇಲ್ಲಿ ಯೇಸು ನೂತನ ಜನನದ ಬಗ್ಗೆ ಮಾತಾಡಿರುವನು.

ನೀನು "ಹೊಸದಾಗಿ ಹುಟ್ಟಬೇಕು" ಎಂದು ಹೇಳಿದ ಯೇಸುವಿನ ಮಾತಿನಲ್ಲಿ, ಆತನು ಸಾಮ್ಯರೂಪ ಭಾಷೆ ಬಳಸಿರುವನು. ನಂತರದಲ್ಲಿ ಆತನು ತನ್ನ ಶಿಷ್ಯರಿಗೆ, ಈ ಸಂಗತಿಗಳನ್ನು ನಾನು ಗೂಢಾರ್ಥವಾಗಿ ತಿಳಿಸಿರುವೆನು, ಆದರೆ ಇನ್ನು ಮೇಲೆ ಸಾಮ್ಯರೂಪವಾಗಿ ನಿಮ್ಮ ಸಂಗಡ ಮಾತಾಡದೇ ತಂದೆಯ ವಿಷಯದಲ್ಲಿ ಸ್ಪಷ್ಟವಾಗಿ ತಿಳಿಸುವೆನು. ಯೋಹಾನ 16:25 ಮಹಾ ಆ ದೇಶದಲ್ಲಿ ಕ್ರಿಸ್ತನು ರಕ್ಷಣೆಯ ವಿಚಾರವನ್ನು ತಿಳಿಸುತ್ತಾ, ಹೊಸದಾಗಿ ಹುಟ್ಟುವ ಕುರಿತು ಮಾತನಾಡದೆ, ಸರಳವಾಗಿ ಮಾತಾಡಿ: ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು ಎಂದು ಹೇಳಿರುವನು (ಮಾರ್ಕ 16:16; ಮತ್ತಾಯ 28:19). ಪೇತ್ರನ ಪ್ರಸಗದಲ್ಲಿ ದೇವರು ಪ್ರೇರಣೆಯಿಂದ ಜನರು "ಹೊಸದಾಗಿ ಹುಟ್ಟಬೇಕು" ಎಂದು ಹೇಳಿದೆ. ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ ಅಂದನು (ಅಪೊಸ್ತಲರ ಕೃತ್ಯಗಳು 2:38). ಜನರು ಅವನ ಮಾತನ್ನು ಕೇಳಿ, ವಿಧೇಯರಾದರು ಅವರು ಹೊಸದಾಗಿ ಹುಟ್ಟಿದರೇ? ಹೌದು, ನಂತರದಲ್ಲಿ ಅಪೊಸ್ತಲರನು ಬರೆದು; ನೀವು ಸಂತೋಷ ದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನು ಶುದ್ಧಮಾಡಿಕೊಂಡದ್ದರಿಂದ ... ನೀವು ಪುರ್ನಜನ್ಮ ಹೊಂದಿದವರಾಗಿದ್ದಿರಲ್ಲೊ ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ. ನಾಶವಾಗದ ಬೀಜದಿಂದಲೇ ಉಂಟಾದದ್ದು. ಅದು ದೇವರ ಸದಾದೇವವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು (1 ಪೇತ್ರ 1:22, 23; ಒತ್ತಿ ಹೇಳಿದ್ದು ನನ್ನದು). ನಂಬಿಕೆ ಹಾಗೂ ವಿಧೇಯತೆಯಿಂದ ಕ್ರೈಸ್ತನಾಗುವದನ್ನು ಪುರ್ನಜನ್ಮ ಎನ್ನುತ್ತಾರೆ.

ಪುರ್ನಜನ್ಮ ಎಂದರೆ ಕ್ರೈಸ್ತರಾಗುವ ಇನ್ನೊಂದು ವಿಧವೆಂದು ಹೇಳಿ, ಯೇಸುವಿನ ಆಜ್ಞೆಯನ್ನು ತಿರಸ್ಕಾರ ಮಾಡಬಾರದು. ದೇವರ ಮಗುವಾಗುವವನ ಅಂತರಾಳದಲ್ಲಿ ಉಂಟಾಗುವ ಶ್ರೇಷ್ಟ ಬದಲಾವಣೆಯೇ ಕ್ರೈಸ್ತತ್ವವಾಗಿದೆ. ಯೋಹಾನನ ಮೊದಲ ಪತ್ರಿಕೆಯಲ್ಲಿ ಇದನ್ನು ಒತ್ತಿ ಹೇಳಲಾಗಿದೆ. ದೇವರಿಂದ ಹುಟ್ಟಿದವನು ನೀತಿಯ ಕಾರ್ಯಗಳನ್ನು ಮಾಡುವದು (1 ಯೋಹಾನ 2:29), ಪಾಪದ ಜೀವಿತವನ್ನು ತಿರಸ್ಕರಿಸುವನು (3:9, 10) ಇತರರನ್ನು ಪ್ರೀತಿ ಸುತ್ತಾನೆ (4:7). ಯೇಸುವಿನ ನಂಬಿಕೆಯಲ್ಲಿರುತ್ತಾನೆ (5:1-5). ಈ ಗುಣಗಳನ್ನು ನಮ್ಮಲ್ಲಿ ಪರೀಕ್ಷಿಸಿಕೊಂಡು ನಾನು ನಿಜವಾದ ಪುರ್ನಜನ್ಮ ಹೊಂದಿದವನೋ ಎಂದು ಗ್ರಹಿಸೋಣ.

ಈ ಬರವಣಿಗೆಯ ಆರಂಭದಲ್ಲಿ ತಿಳಿಸಿದ ಗಾದೆಯ ಮಾತುಗಳಿಗೆ ಹಿಂದಿರುಗೋಣ: ಕೆಲವರು ಒಂದೇ ಸಾರಿ ಹಟ್ಟಿದರೂ, ಎರಡೂ ಸಾರಿ ಸಾಯುತ್ತಾರೆ. ಇವರು ಧೈಹಿಕವಾಗಿ ಹುಟ್ಟಿದ್ದರೂ, ಆತ್ಮೀಕವಾದ ಪುರ್ನಜನ್ಮ ಹೊಂದಿರುವದಿಲ್ಲ. ಆದ್ದರಿಂದ ಧೈಹಿಕ ಮರಣದ ನಂತರ ಅವರು ನರಕವೆಂಬ "ಎರಡನೇ ಮರಣಕ್ಕೆ" ಒಳಗಾಗುವರು (ಪ್ರಕಟನೆ 20:14; 21:8). ಬೇರೆವರು ಎರಡು ಸಾರಿ ಹುಟ್ಟಿ, ಒಂದೇ ಸಾರಿ ಸಾಯುವರು ಅವು ಪುರ್ನಜನ್ಮ ಹೊಂದಿದವರು, ಹಾಗೂ ಕ್ರೈಸ್ತರಾದವರು, ಅವರು ಮರಣದವೆಗೆ ನಂಬಿಗಸ್ತರಾಗಿದ್ದರೆ (ಪ್ರಕಟನೆ 2:10), ಎರಡನೆಯ ಮರಣದಿಂದ ಪಾರಾಗುವರು (ವಚನ 11). ನೀನು ಪುರ್ನಜನ್ಮ ಹೊಂದಿರುವೆಯಾ?